# ಎಬಿಎಂ ಇನ್ಫೋಸಿಟಿ ಓನರ್ಸ್ ವೆಲ್‌ಫೇರ್ ಆಸೋಷಿಯೇಷನ್.

ನಂ.೩೮೯, ಎಬಿಎಂ ಇನ್ಫೋಸಿಟಿ ಬಡಾವಣೆ, ವಾರ್ಡ್ ಸಂಖ್ಯೆ ೦೨, ಕಲ್ಲುಗೋಪನಹಳ್ಳಿ ಗ್ರಾಮ, ಬಿಡದಿ ಹೋಬಳಿ, ರಾಮನಗರ ತಾ॥
ಮತ್ತು ಜಿಲ್ಲೆ–೫೬೨೧೯.

---

**ಇವರಿಗೆ,** | **ದಿನಾಂಕ:** ೧೦/೦೯/೨೦೨೧

ಸಂಘಗಳ ಜಿಲ್ಲ್ಲಾ ನೋಂದಣಾಧಿಕಾರಿಗಳು

ರಾಮನಗರ, ರಾಮನಗರ ಜಿಲ್ಲೆ

**ಮಾನ್ಯರೇ,**

**ವಿಷಯ:–** ಸಂಘವನ್ನು ನೋಂದಣಿ ಮಾಡುವ ಬಗ್ಗೆ.

–––––*****–––––

ಪ್ರಸ್ತಾಪಿತ ವಿಷಯಕ್ಕೆ ಸಂಬಂಧಿಸಿದಂತೆ, ಎಬಿಎಂ ಇನ್ಫೋಸಿಟಿ ಓನರ್ಸ್ ವೆಲ್‌ಫೇರ್ ಆಸೋಷಿಯೇಷನ್. ಈ ಸಂಸ್ಥೆಯ ಆಡಳಿತ ಮಂಡಳಿಯ ಸದಸ್ಯರಾದ ನಾವು ನಂ.೩೮೯, ಎಬಿಎಂ ಇನ್ಫೋಸಿಟಿ ಬಡಾವಣೆ, ವಾರ್ಡ್ ಸಂಖ್ಯೆ ೦೨, ಕಲ್ಲುಗೋಪನಹಳ್ಳಿ ಗ್ರಾಮ, ಬಿಡದಿ ಹೋಬಳಿ, ರಾಮನಗರ ತಾ॥ ಮತ್ತು ಜಿಲ್ಲೆ–೫೬೨೧೯. ಈ ಸ್ಥಳದಲ್ಲಿ ಸಂಘವನ್ನು ನೋಂದಣಿ ಮಾಡಲು ಉದ್ದೇಶಿಸಿದ್ದು, ಅದರನ್ವಯ ಸಂಘದ ಜ್ಞಾಪನಾ ಪತ್ರ ಹಾಗೂ ನಿಯಮ ಮತ್ತು ನಿಬಂಧನೆಗಳೊಂದಿಗೆ ಪ್ರಸ್ತಾವನೆ ಸಲ್ಲಿಸಿದೆ. ಆದ್ದರಿಂದ, ಕರ್ನಾಟಕ ಸಂಘಗಳ ನೋಂದಣಿ ಅಧಿನಿಯಮ ೧೯೬೦ ರ ಪ್ರಕಾರ ನೋಂದಣಿ ಮಾಡಬೇಕೆಂದು ಈ ಮೂಲಕ ಕೋರಿದೆ.

**ನಿಮ್ಮ ವಿಶ್ವಾಸಿ,**

| ಕ್ರ.ಸಂ | ಹೆಸರು | ಸಂಘದ ಹುದ್ದೆ | ಸಹಿ |
|---|---|---|---|
| ೧. | ಕೆ.ಪ್ರಕಾಶ್ ರೈ ಬಿನ್ ಸುವರ್ಣ ರೈ | ಅಧ್ಯಕ್ಷರು | |
| ೨. | ಜಿತೇಂದ್ರ ಮಲ್ಲಿ, ಬಿನ್ ಕೆ. ಉಗ್ಗಪ್ಪ ಮಲ್ಲಿ | ಉಪಾಧ್ಯಕ್ಷರು | |
| ೩. | ನಾಗೇಶ್ವರ್ ವಿಜಾಪುರ್ ಬಿನ್ ಮಲ್ಲೇಶಪ್ಪ ವಿಜಾಪುರ್. | ಕಾರ್ಯದರ್ಶಿ | |

| | | | |
|---|---|---|---|
| ೪. | ಮನ್ಸೂರ್ ಕಲತ್ತಿನಾಲ್ ಪಕ್ಕರ್,<br>ಬಿನ್ ಪಕ್ಕರ್ ಕಲತ್ತಿನಾಲ್ ಅಹಮ್ಮದ್, | ಖಜಾಂಚಿ | |
| ೫. | ಕಾರ್ತಿಕ್ ರಾಮಚಂದ್ರ<br>ಬಿನ್. ಹೆಚ್.ಎ.ರಾಮಚಂದ್ರ | ಜಂಟಿ ಕಾರ್ಯದರ್ಶಿ | |
| ೬. | ಪುಷ್ಪರಾಜ್ ಶೆಟ್ಟಿ,<br>ಬಿನ್ ಎನ್. ಜಗನ್ನಾಥ ಶೆಟ್ಟಿ, | ಸಲಹೆಗಾರರು | |
| ೭. | ಎಸ್.ಆರ್.ನವೀನ್<br>ಬಿನ್. ಎಸ್. ರಾಧಕೃಷ್ಣ | ನಿರ್ದೇಶಕರು | |
| ೮. | ಸ್ಮಿತಾ ಪುಷ್ಪರಾಜ್ ಶೆಟ್ಟಿ<br>ಕೋಂ. ಪುಷ್ಪರಾಜ್ ಶೆಟ್ಟಿ | ನಿರ್ದೇಶಕರು | |
| ೯. | ಶ್ರೀಕಾಂತ್.ಕೆ<br>ಲೇ. ಪಿ.ಕೆ.ಉಪಾಧ್ಯಾಯ | ನಿರ್ದೇಶಕರು | |
| ೧೦. | ರೊನಾಲ್ಡ್<br>ಬಿನ್. ಜೋಸೆಫ್ ಮಾರ್ಟೀಸ್, | ನಿರ್ದೇಶಕರು | |
| ೧೧. | ಮುದ್ದಣ್ಣ. ಹೆಚ್,<br>ಬಿನ್ ಲೇಟ್. ಎಸ್. ಎಂ. ಹಂಪಣ್ಣ, | ನಿರ್ದೇಶಕರು | |
| ೧೨. | ಸತೀಶ್. ಬಿ.ಸಿ.<br>ಬಿನ್ ಬಿ. ಎನ್. ಚಂದ್ರಶೇಖರಯ್ಯ, | ನಿರ್ದೇಶಕರು | |
| ೧೩. | ನಿರ್ಮಲ್ ಕುಮಾರ್<br>ಬಿನ್.ಬಾಬುಲಾಲ್ | ನಿರ್ದೇಶಕರು | |
| ೧೪. | ದಿನೇಶ್ ಹೆಗ್ಡೆ,<br>ಬಿನ್ ರಾಘವ್ ಹೆಗ್ಡೆ, | ನಿರ್ದೇಶಕರು | |
| ೧೫. | ಕಿರಣ್ ಕುಮಾರ್,<br>ಬಿನ್ ಎಂ.ಡಿ. ಹೆಗ್ಡೆ, | ನಿರ್ದೇಶಕರು | |

| | | | |
|---|---|---|---|
| ೧೬. | ಶಿವಧ್ವಜ್ ಶೆಟ್ಟಿ,<br>ಬಿನ್ ಕೆ.ಪಿ. ತಿಮ್ಮಪ್ಪ ಶೆಟ್ಟಿ, | ನಿರ್ದೇಶಕರು | |
| ೧೭. | ಅನಿಲ್ ಕುಮಾರ್,<br>ಬಿನ್ ಲೇಟ್. ಪಿ.ಕೆ. ಶಿವರಾವ್, | ನಿರ್ದೇಶಕರು | |

# ಎಬಿಎಂ ಇನ್ಫೋಸಿಟಿ ಓನರ್ಸ್ ವೆಲ್‌ಫೇರ್ ಆಸೋಷಿಯೇಷನ್.

ನಂ.389, ಎಬಿಎಂ ಇನ್ಫೋಸಿಟಿ ಬಡಾವಣೆ, ವಾರ್ಡ್ ಸಂಖ್ಯೆ 02, ಕಲ್ಲುಗೋಪನಹಳ್ಳಿ ಗ್ರಾಮ, ಬಿಡದಿ ಹೋಬಳಿ,
ರಾಮನಗರ ತಾ॥ ಮತ್ತು ಜಿಲ್ಲೆ–562109.

---

ಪತ್ರ ಸಂಖ್ಯೆ:-ABMIOWA/01/2021-22 ದಿನಾಂಕ:-25.08.2021

ಸ್ಥಳ:- ಬಿಡದಿ

## ಮಹಾಸಭಾ ತಿಳುವಳಿಕೆ ನೋಟಿಸ್

ಎಬಿಎಂ ಇನ್ಫೋ ಸಿಟಿ ಓನರ್ಸ್ ವೆಲ್ಫೇರ್ ಅಸೋಸಿಯೇಷನ ಮಹಾಸಭೆಯನ್ನು, ದಿನಾಂಕ 09.09.2021 ರಂದು **ಸಂಜೆ** 04.30 ಕ್ಕೆ ಸರಿಯಾಗಿ ಈ ಮೇಲ್ಕಂಡ ವಿಳಾಸದಲ್ಲಿ ಆಯೋಜಿಸಲಾಗಿದೆ, ಈ ಮಹಾಸಭೆಯಲ್ಲಿ ಎಬಿಎಂ ಇನ್ಫೋ ಸಿಟಿ ಓನರ್ಸ್ ವೆಲ್ಫೇರ್ ಅಸೋಸಿಯೇಷನ್ನ ನೂತನ ಆಡಳಿತ ಮಂಡಳಿಯನ್ನು ರಚನೆ ಮಾಡುವುದು ಮತ್ತು ಜಿಲ್ಲಾ ಸಂಘಗಳ ನೋಂದಣಾಧಿಕಾರಿಗಳ ಕಚೇರಿ, ರಾಮನಗರದಲ್ಲಿ ನೋಂದಾವಣೆ ಮಾಡುವ ಬಗ್ಗೆ ಚರ್ಚಿಸಿ ಸಮಗ್ರ ದಾಖಲಾತಿಗಳನ್ನು ಸಿದ್ಧಪಡಿಸಲು ಸಹಕರಿಸಬೇಕೆಂದು ಈ ಮೂಲಕ ವಿನಂತಿಸಿಕೊಳ್ಳುತ್ತೇನೆ.

ವಿಶೇಷ ಸೂಚನೆ

1. ನಿಗದಿಪಡಿಸಿದ ಸಮಯಕ್ಕೆ ಸರಿಯಾಗಿ ಹಾಜರಾಗುವುದು
2. ಅಸೋಸಿಯೇಷನ್ನ ಬಗ್ಗೆ ಯಾವುದಾದರೂ ಸಲಹೆ-ಸೂಚನೆಗಳು ಇದ್ದರೆ ಮೂರು ದಿನಕ್ಕೆ ಮೊದಲು ತಿಳಿಸು ತಿಳಿಸುವುದು

1. ಕೆ.ಪ್ರಕಾಶ್ ರೈ
2. ಜಿತೇಂದ್ರ ಮಲ್ಲಿ
3. ನಾಗೇಶ್ವರ್ ವಿಜಾಪುರ್
4. ಮನ್ಸೂರ್ ಕಲತ್ತಿನಾಲ್ ಪಕ್ಕರ್
5. ಕಾರ್ತಿಕ್ ರಾಮಚಂದ್ರ
6. ಪುಷ್ಪರಾಜ್ ಶೆಟ್ಟಿ,
7. ಎಸ್.ಆರ್.ನವೀನ್
8. ಸ್ಮಿತಾ ಪುಷ್ಪರಾಜ್ ಶೆಟ್ಟಿ
9. ಶ್ರೀಕಾಂತ್.ಕೆ
10. ರೊನಾಲ್ಡ್
11. ಮುದ್ದಣ್ಣ. ಹೆಚ್,
12. ಸತೀಶ್. ಬಿ.ಸಿ.
13. ನಿರ್ಮಲ್ ಕುಮಾರ್
14. ದಿನೇಶ್ ಹೆಗ್ಡೆ
15. ಕಿರಣ್ ಕುಮಾರ್
16. ಶಿವಧ್ವಜ್ ಶೆಟ್ಟಿ,
17. ಅನಿಲ್ ಕುಮಾರ್

# ಎಬಿಎಂ ಇನ್ಫೋಸಿಟಿ ಓನರ್ಸ್ ವೆಲ್‌ಫೇರ್ ಆಸೋಷಿಯೇಷನ್.

ನಂ.೩೮೯, ಎಬಿಎಂ ಇನ್ಫೋಸಿಟಿ ಬಡಾವಣೆ, ವಾರ್ಡ್ ಸಂಖ್ಯೆ ೦೨, ಕಲ್ಲುಗೋಪನಹಳ್ಳಿ ಗ್ರಾಮ, ಬಿಡದಿ ಹೋಬಳಿ, ರಾಮನಗರ ತಾ॥

ಮತ್ತು ಜಿಲ್ಲೆ-೫೬೨೧೦೯

---

<u>ಸಂಘದ ಸದಸ್ಯರು ದಿನಾಂಕ: ೦೯/೦೯/೨೦೨೧ ರಂದು ನಡೆಸಿದ ಸಭಾ ನಡವಳಿಗಳು</u>

| | |
|---|---|
| ವಿಷಯ:- | ಸಂಘವನ್ನು ನೋಂದಣಿ ಮಾಡುವ ಬಗ್ಗೆ. |
| ನಿರ್ಣಯ:- | **ಎ.ಬಿ.ಎಂ ಇನ್ಫೋಸಿಟಿ ಓನರ್ಸ್ ವೆಲ್‌ಫೇರ್ ಆಸೋಷಿಯೇಷನ್.** ಎಂಬ ಹೆಸರಿನ ಸಂಘವನ್ನು ನಂ.೩೮೯, ಎಬಿಎಂ ಇನ್ಫೋಸಿಟಿ ಬಡಾವಣೆ, ವಾರ್ಡ್ ಸಂಖ್ಯೆ ೦೨, ಕಲ್ಲುಗೋಪನಹಳ್ಳಿ ಗ್ರಾಮ, ಬಿಡದಿ ಹೋಬಳಿ, ರಾಮನಗರ ತಾ॥ ಮತ್ತು ಜಿಲ್ಲೆ-೫೬೨೧೦೯<br>ಈ ವಿಳಾಸದಲ್ಲಿ, ಕರ್ನಾಟಕ ಸಂಘಗಳ ನೋಂದಣಿ ಅಧಿನಿಯಮ ೧೯೬೦ ರ ಪ್ರಕಾರ ನೋಂದಣಿ ಮಾಡಲು ತೀರ್ಮಾನಿಸಿ, ಅದರನ್ವಯ ಸಂಘದ ಜ್ಞಾಪನಾ ಪತ್ರ ಹಾಗೂ ನಿಯಮ ಮತ್ತು ನಿಬಂಧನೆಗಳೊಂದಿಗೆ ಪ್ರಸ್ತಾವೆ ತಯಾರಿಸಲಾಯಿತು. ಈ ಸಂಘದ ಆಡಳಿತ ಮಂಡಳಿ ಸದಸ್ಯರನ್ನು ಹಾಗೂ ಪದಾಧಿಕಾರಿಗಳನ್ನು ಸರ್ವಾನುಮತದಿಂದ ಚುನಾಯಿಸಲಾಯಿತು. ಮತ್ತು ಸಂಘಗಳ ನೋಂದಣಾಧಿಕಾರಿಗಳೊಂದಿಗೆ ಪತ್ರ ವ್ಯವಹಾರ ಮಾಡಲು ಸಂಘದ ಅಧ್ಯಕ್ಷರು/ಕಾರ್ಯದರ್ಶಿಯವರಿಗೆ ಪೂರ್ಣ ಅಧಿಕಾರ ನೀಡಲು ತೀರ್ಮಾನಿಸಲಾಯಿತು. |

| <u>ಕ್ರ.ಸಂ</u> | <u>ಹೆಸರು</u> | <u>ಸಂಘದ ಹುದ್ದೆ</u> | <u>ಸಹಿ</u> |
|---|---|---|---|
| ೦೧. | ಕೆ.ಪ್ರಕಾಶ್ ರೈ ಬಿನ್ ಸುವರ್ಣ ರೈ | ಅಧ್ಯಕ್ಷರು | |
| ೦೨. | ಜಿತೇಂದ್ರ ಮಲ್ಲಿ<br>ಬಿನ್ ಕೆ. ಉಗ್ಗಪ್ಪ ಮಲ್ಲಿ | ಉಪಾಧ್ಯಕ್ಷರು | |
| ೦೩. | ನಾಗೇಶ್ವರ್ ವಿಜಾಪುರ್<br>ಬಿನ್ ಮಲ್ಲೇಶಪ್ಪ ವಿಜಾಪುರ್. | ಕಾರ್ಯದರ್ಶಿ | |
| ೦೪. | ಮನ್ಸೂರ್ ಕಲತ್ತಿನಾಲ್ ಪಕ್ಕರ್,<br>ಬಿನ್ ಪಕ್ಕರ್ ಕಲತ್ತಿನಾಲ್ ಅಹಮ್ಮದ್, | ಖಜಾಂಚಿ | |
| ೦೫. | ಕಾರ್ತಿಕ್ ರಾಮಚಂದ್ರ<br>ಬಿನ್. ಹೆಚ್.ಎ.ರಾಮಚಂದ್ರ | ಜಂಟಿ<br>ಕಾರ್ಯದರ್ಶಿ | |

| | | | |
|---|---|---|---|
| ೦೬. | ಪುಷ್ಪರಾಜ್ ಶೆಟ್ಟಿ,<br>ಬಿನ್ ಎನ್. ಜಗನ್ನಾಥ ಶೆಟ್ಟಿ, | ಸಲಹೆಗಾರರು | |
| ೦೭. | ಎಸ್.ಆರ್.ನವೀನ್<br>ಬಿನ್. ಎಸ್. ರಾಧಕೃಷ್ಣ | ನಿರ್ದೇಶಕರು | |
| ೦೮. | ಸ್ಮಿತಾ ಪುಷ್ಪರಾಜ್ ಶೆಟ್ಟಿ<br>ಕೋಂ. ಪುಷ್ಪರಾಜ್ ಶೆಟ್ಟಿ | ನಿರ್ದೇಶಕರು | |
| ೦೯. | ಶ್ರೀಕಾಂತ್.ಕೆ<br>ಲೇ. ಪಿ.ಕೆ.ಉಪಾಧ್ಯಾಯ | ನಿರ್ದೇಶಕರು | |
| ೧೦. | ರೊನಾಲ್ಡ್<br>ಬಿನ್. ಜೋಸೆಫ್ ಮಾರ್ಟೀಸ್, | ನಿರ್ದೇಶಕರು | |
| ೧೧. | ಮುದ್ದಣ್ಣ. ಹೆಚ್,<br>ಬಿನ್ ಲೇಟ್. ಎಸ್. ಎಂ. ಹಂಪಣ್ಣ, | ನಿರ್ದೇಶಕರು | |
| ೧೨. | ಸತೀಶ್. ಬಿ.ಸಿ.<br>ಬಿನ್ ಬಿ. ಎನ್. ಚಂದ್ರಶೇಖರಯ್ಯ, | ನಿರ್ದೇಶಕರು | |
| ೧೩. | ನಿರ್ಮಲ್ ಕುಮಾರ್<br>ಬಿನ್.ಬಾಬುಲಾಲ್ | ನಿರ್ದೇಶಕರು | |
| ೧೪. | ದಿನೇಶ್ ಹೆಗ್ಡೆ,<br>ಬಿನ್ ರಾಘವ್ ಹೆಗ್ಡೆ, | ನಿರ್ದೇಶಕರು | |
| ೧೫. | ಕಿರಣ್ ಕುಮಾರ್,<br>ಬಿನ್ ಎಂ.ಡಿ. ಹೆಗ್ಡೆ, | ನಿರ್ದೇಶಕರು | |
| ೧೬. | ಶಿವಧ್ವಜ್ ಶೆಟ್ಟಿ,<br>ಬಿನ್ ಕೆ.ಪಿ. ತಿಮ್ಮಪ್ಪ ಶೆಟ್ಟಿ, | ನಿರ್ದೇಶಕರು | |
| ೧೭. | ಅನಿಲ್ ಕುಮಾರ್,<br>ಬಿನ್ ಲೇಟ್. ಪಿ.ಕೆ. ಶಿವರಾವ್, | ನಿರ್ದೇಶಕರು | |

# ಎಬಿಎಂ ಇನ್ಫೋಸಿಟಿ ಓನರ್ಸ್ ವೆಲ್‌ಫೇರ್ ಆಸೋಷಿಯೇಷನ್.

ನಂ.೩೮೯, ಎಬಿಎಂ ಇನ್ಫೋಸಿಟಿ ಬಡಾವಣೆ, ವಾರ್ಡ್ ಸಂಖ್ಯೆ ೦೨, ಕಲ್ಲುಗೋಪನಹಳ್ಳಿ ಗ್ರಾಮ, ಬಿಡದಿ ಹೋಬಳಿ, ರಾಮನಗರ ತಾ॥
ಮತ್ತು ಜಿಲ್ಲೆ–೫೬೨೧೦೯

---

## <u>ಜ್ಞಾಪನಾ ಪತ್ರ</u>

೧. ಸಂಘದ ಹೆಸರು :– **<u>ಎಬಿಎಂ ಇನ್ಫೋಸಿಟಿ ಓನರ್ಸ್ ವೆಲ್‌ಫೇರ್ ಆಸೋಷಿಯೇಷನ್.</u>**

೨. ಸಂಘದ ವಿಳಾಸ :– ನಂ.೩೮೯, ಎಬಿಎಂ ಇನ್ಫೋಸಿಟಿ ಬಡಾವಣೆ, ವಾರ್ಡ್ ಸಂಖ್ಯೆ ೦೨, ಕಲ್ಲುಗೋಪನಹಳ್ಳಿ ಗ್ರಾಮ, ಬಿಡದಿ ಹೋಬಳಿ, ರಾಮನಗರ ತಾ॥ ಮತ್ತು ಜಿಲ್ಲೆ–೫೬೨೧೦೯

೩. ಸಂಘದ ಕಾರ್ಯವ್ಯಾಪ್ತಿ :– **ಎಬಿಎಂ ಇನ್ಫೋಸಿಟಿ ಬಡಾವಣೆ,** ವಾರ್ಡ್ ಸಂಖ್ಯೆ ೦೨, ಕಲ್ಲುಗೋಪನಹಳ್ಳಿ ಗ್ರಾಮ, ಬಿಡದಿ ಹೋಬಳಿ, ರಾಮನಗರ ತಾ॥ ಮತ್ತು ಜಿಲ್ಲೆ–೫೬೨೧೦೯

೪. ಸಂಘದ ಉದ್ದೇಶಗಳು :–

1. **"ಎಬಿಎಂ ಇನ್ಫೋಸಿಟಿ ಓನರ್ಸ್ ವೆಲ್‌ಫೇರ್ ಆಸೋಷಿಯೇಷನ್ "(ಃಒಖಔಘ)** ಮೂಲಕ ಎಬಿಎಂ ಇನ್ಫೋಸಿಟಿ ಬಡಾವಣೆಯಲ್ಲಿ ನಿವೇಶನ ಮಾಲೀಕರ ಸಾಮೂಹಿಕ ಹಿತಾಸಕ್ತಿಗಳನ್ನು ಪರಿಗಣಿಸಿ ಮತ್ತು, ಮಾಲೀಕರು/ ಬಾಡಿಗೆದಾರರ ಹಕ್ಕುಗಳನ್ನು ಅಡ್ಡಿ ಪಡಿಸದೆ ಸುಗಮ ಮತ್ತು ಸಮರ್ಥನೀಯ ಆಡಳಿತವನ್ನು ಸ್ಥಾಪಿಸುವ ಗುರಿಯನ್ನು ಬೈಲಾ(ಃಥಿಜ-ಟಚಿತಿ) ಹೊಂದಿದೆ. ಎಬಿಎಂ ಇನ್ಫೋಸಿಟಿ ಬಡಾವಣೆಯಲ್ಲಿರುವ ಪ್ರಸ್ತುತ ಅಥವಾ ಭವಿಷ್ಯದ ಮಾಲೀಕರು, ಬಾಡಿಗೆದಾರರು ಅಥವಾ ಮನೆ ಕೆಲಸಗಾರರು ಅಥವಾ ಯಾವುದೇ ರೀತಿಯ ಬಡಾವಣೆ ಸೌಲಭ್ಯಗಳನ್ನು ಬಳಸಬಹುದಾದ ಯಾವುದೇ ವ್ಯಕ್ತಿ ಈ ಬೈಲಾಗಳಲ್ಲಿ ಸೂಚಿಸಲಾದ ನಿಯಮ ಮತ್ತು ನಿಬಂಧನೆಗಳಿಗೆ ಒಳಪಟ್ಟಿರುತ್ತಾರೆ. ಈ ನಿಯಮ ಮತ್ತು ನಿಬಂಧನೆಗಳು ಬಾಡಿಗೆ ಅಥವಾ ಪರವಾನಿಗೆ ಗುತ್ತಿಗೆದಾರರು ಅಥವಾ ಬಡವಣೆಯಲ್ಲಿರುವ ಯಾವುದೇ ನಿವೇಶನವನ್ನು ಅಡಮಾನದ ಮೇಲೆ ತೆಗೆದುಕೊಳ್ಳುವ ಪ್ರತಿಯೊಬ್ಬರಿಗೂ ಅನ್ವಯಿಸುತ್ತದೆ.

2. ನಿವೇಶನಗಳ ಸ್ವಾಧೀನ ಅಥವಾ ಬಾಡಿಗೆ ತೆಗೆದುಕೊಳ್ಳುವಿಕೆ ಅಥವಾ ಪರವಾನಗಿ ಅಥವಾ ಯಾವುದೇ ನಿವೇಶನಗಳ ಅಕ್ಯುಪಿಯೆನ್ಸಿ ಆಕ್ಟ್‌ನ ನಿಯಮಗಳ ಪ್ರಕಾರ ಅನುಸರಿಸರಿಸಲಾಗುತ್ತದೆ.ಬಾಡಿಗೆಗೆ ಪಡೆದಿರುವ ವ್ಯಕ್ತಿಯು ಈ ನಿಯಮಗಳು ಮತ್ತು ನಿಬಂಧನೆಗಳಿಗೆ ಸಹಮತವನ್ನು ಪಡೆಯುವುದು ನಿವೇಶನ ಮಾಲೀಕರ(ಅಥವಾ ಅವರ ನೇಮಿತ ಪ್ರತಿನಿಧಿಗಳು) ಕರ್ತವ್ಯವಾಗಿರುತ್ತದೆ.
3. ಎಬಿಎಂ ಇನ್ಫೋಸಿಟಿ ಓನರ್ಸ್ ವೆಲ್‌ಫೇರ್ ಆಸೋಷಿಯೇಷನ್ ಬೈಲಾ ನಿರ್ವಾಹಣೆಯನ್ನು ಸಕ್ರಿಯಗೊಳಿಸಿ ಹಣವನ್ನು ಪರಿಣಾಮಕಾರಿಯಾಗಿ ನಿರ್ವಹಿಸಿ ಬಡಾವಣೆಯ ನಿವಾಸಿಗಳಿಗೆ ಪರಿಣಾಮಕಾರಿ ಆಡಳಿತವನ್ನು ಒದಗಿಸಿ, ಸಾಮಾನ್ಯ ಪ್ರದೇಶಗಳು ಮತ್ತು ಸೌಲಬ್ಯಗಳ ನಿರ್ವಹಣೆ ಅಗತ್ಯಗಳನ್ನು ಪೂರೈಸುತ್ತದೆ.

4. ಎಬಿಎಂ ಇನ್ಫೋಸಿಟಿ ಓನರ್ಸ್ ವೆಲ್‌ಫೇರ್ ಆಸೋಷಿಯೇಷನ್ ಕಾರ್ಯನಿರ್ವಹಿಸಲು ಮತ್ತು ಎಬಿಎಂ ಇನ್ಫೋಸಿಟಿ ಬಡಾವಣೆಯಲ್ಲಿರುವ ನಿವೇಶನ'ಗಳು ಸಮುದಾಯ ಪ್ರದೇಶದಲ್ಲಿನ ಸಹಕಾರ ತತ್ವಗಳಿಗೆ ಅನುಗುಣವಾಗಿ ಎಲ್ಲ ನಿವೇಶನ ಮಾಲೀಕರ ಅನಕೂಲಕ್ಕಾಗಿ ಸಾಮಾನ್ಯ ಪ್ರದೇಶಗಳು ಮತ್ತು ಸೌಲಭ್ಯಗಳನ್ನು ನೀಯಂತ್ರಿಸಲು, ಆರ್ಥಿಕ ಆಸಕ್ತಿ, ಯೋಗಕ್ಷೇಮ ಮತ್ತು ಕಲ್ಯಾಣವನ್ನು ಉತ್ತೇಜಿಸಲು, ಮಾಲೀಕರ ಕಾನೂನು ಬದ್ಧ ಹಕ್ಕುಗಳು ಮತ್ತು ಸವಲತ್ತುಗಳನ್ನುರಕ್ಷಿಸಲು, ನಿವೇಶನ'ದಾರರಲ್ಲಿ ಪರಸ್ಪರ ಸಹಾಯ ಮತ್ತು ಸೌಹಾರ್ದತೆಯನ್ನು ಪ್ರ್ರೋತ್ಸಾಹಿಸಲು ಖಾಯಿದೆಯಲ್ಲಿ ಒದಗಿಸಲಾದ ಎಲ್ಲಾ ನಿಯಮಗಳನ್ನು ಯಾವುದೇ ಪಕ್ಷಪಾತವಿಲ್ಲದೆ ಅನುಷ್ಠಾನಗೊಳಿಸುವುದು.

5. ನಿವೇಶನ ಮಾಲೀಕರು ಮತ್ತು ನಿವಾಸಿಗಳ ಅನುಕೂಲಕ್ಕಾಗಿ ವ್ಯಕ್ತಿಗಳು ಅಥವಾ ಸಂಸ್ಥೆಗಳೊಂದಿಗೆ ಅಥವಾ ಶಿಕ್ಷಣ, ದೈಹಿಕ, ಸಾಮಾಜಿಕ, ಮನರಂಜನಾ, ಅಥವಾ ಇತರ ಚಟುವಟಿಕೆಗಳಲ್ಲಿ ಜಂಟಿಯಾಗಿ ಸ್ಥಾಪಿಸಲು ಎಲ್ಲರಿಗೂ ಅನುವು ಮಾಡಿಕೊಡುವುದು.

6. ಸದಸ್ಯರ ನಡುವೆ ನಿಕಟ ಸಹಕಾರವನ್ನು ಉತ್ತೇಜಿಸುವುದು ಮತ್ತು ನಿವೇಶನ' ಮಾಲೀಕರಿಗೆ/ ನಿವಾಸಿಗಳಿಗೆ ಬಡಾವನೆಯಲ್ಲಿ ವಾಸ್ತವ್ಯದ ಆನಂದ ಮತ್ತು ಸಂಬಂಧಿತ ವಿಷಯಗಳ ಕುರಿತು ಎಲ್ಲಾ ಸಂಭಾವ್ಯ ಸಲಹೆ ಮತ್ತು ಮಾರ್ಗದಶನಗಳನ್ನು ನೀಡಲು ಸದಸ್ಯರಿಗೆ ಅನುಕೂಲಮಾಡಿಕೊಡುವುದು.

7. ಈ ಬೈಲಾ(ಃಥಿಜ-ಐಚಿತಿ) ಅಸೋಷಿಯೇಶನ್'ನ ನಿರ್ಧಿಷ್ಟ ಅವಶ್ಯಕತೆಗಳನ್ನು ಪೂರೈಸಲು ರೂಪಿಸಲಾದ ಸಂಘಗಳ ಕಾಯ್ದೆ ಮತ್ತು ನಿಯಮಗಳಿಗೆ ಒಳಪಟ್ಟಿರುತ್ತದೆ. ಯಾವುದೇ ಉದ್ದೇಶಕ್ಕಾಗಿ ಈ ಬೈಲಾದ ನಿಭಂಧನೆಯನ್ನು ತಿದ್ದುಪಡಿ ಮಾಡದೇ ಅಸೋಷಿಯೇಶನ್ ತನ್ನ ವ್ಯಾಪ್ತಿಯನ್ನು ಮೀರಿ ಕಾರ್ಯನಿರ್ವಹಿಸುವುದಿಲ್ಲ. ಈ ಬೈಲಾದ ಯಾವುದೇ ತಿದ್ದುಪಡಿಯನ್ನು ವಾರ್ಷಿಕ ಸರ್ವ ಸದಸ್ಯರ ಸಭೆ(ಎ.ಜಿ.ಎಂ) ಅಥವಾ ವಿಶೇಷ ಸರ್ವ ಸದಸ್ಯರ ಸಭೆಯಲ್ಲಿ ಅನುಮೋದನೆಯೊಂದಿಗೆ ಬೈಲಾಗಳ ತಿದ್ದುಪಡಿಗೆ ಶೇ.೫೧% ಸದಸ್ಯರ ಅನುಮತಿ ಪಡೆಯುವುದು ಕಡ್ಡಾಯವಾಗಿರುತ್ತದೆ. ಯಾವುದೇ ಸಂಘರ್ಷ ಅಥವಾ ವ್ಯಾಖ್ಯಾನದ ಅಗತ್ಯವಿದ್ದಲ್ಲಿ ಕಾಯ್ದೆ ಮತ್ತು ನಿಬಂಧನೆಗಳು ಈ ಬೈಲಾದ ಮೇಲೆ ಮೇಲುಗೈ ಸಾಧಿಸುತ್ತದೆ.

8. ಎ.ಬಿ.ಎಂ ಇನ್ಫೋಸಿಟಿ ಓನರ್ಸ್ ವೆಲ್‌ಫೇರ್ ಆಸೋಷಿಯೇಷನ್'ನ ಈ ಬೈಲಾ(ಃಥಿಜ-ಐಚಿತಿ)ವು ಎ.ಬಿ.ಎಂ ಇನ್ಫೋಸಿಟಿ ಬಡಾವಣೆಯ ಎಲ್ಲಾ ನಿವೇಶನ'ಮಾಲೀಕರಿಗೆ/ ಬಾಡಿಗೆದಾರರಿಗೆ/ ಪರವಾನಿಗೆದಾರರಿಗೆ ಅನ್ವಯಿಸುತ್ತದೆ.

9. ಸಾರ್ವಜನಿಕ ಹಿತಾಸಕ್ತಿಗಳನ್ನು ಕಾಪಾಡಿಕೊಂಡು ಬರುವುದು ಮತ್ತು ಅದಕ್ಕೆ ಪೂರಕವಾದ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವುದು.ಕರ್ನಾಟಕ ಸಂಘಗಳ ನೋಂದಣಿ ಅಧಿನಿಯಮ ೧೯೬೦ ಪ್ರಕರಣ ೩ರ ಪ್ರಕಾರ ಅಸೋಷಿಯೇಶನ್'ನಲ್ಲಿ ಸಂಗ್ರಹವಾಗುವ ಹಣವನ್ನು ಬಡಾವನೆಯ ರಸ್ತೆ ನಿರ್ವಹಣೆ, ಒಳಚರಂಡಿಯ ನಿರ್ವಹಣೆ, ಕಸವಿಲೇವಾರಿಯ ಸೌಲಭ್ಯಗಳು, ನೀರಿನ ಪಂಪುಗಳ ನಿರ್ವಹಣೆ, ನೀರಿನ ಸಂಗ್ರಹ ಮತ್ತು ಪೂರೈಕೆ, ಸಾಮ್ಯಾನ್ಯ ಪ್ರದೇಶಗಳ ವಿದ್ಯುತ್ ದೀಪಗಳ ನಿರ್ವಹಣೆ, ಉದ್ಯಾನವನ ನಿರ್ವಹಣೆ, ಬಡಾವಣೆಯ ನೈರ್ಮಲ್ಯ ನಿರ್ವಹಣೆ, ಪಾರ್ಕಿಂಗ್ ವ್ಯವಸ್ತೆ, ಭದ್ರತಾ ಮತ್ತು ಕಛೇರಿ ಸಿಬ್ಬಂಧಿಗಳ ವೇತನ ನಿರ್ವಹಣೆ ಮತ್ತು ಬಡಾಣೆಯ ಇತರ ನಿರ್ವಹಣೆಗಳಿಗೆ ಉಪಯೋಗಿಸುವುದು. ಯಾವುದೇ ಕಾರಣದಿಂದ ಆ ಹಣವನ್ನು ಸದಸ್ಯರಿಗೆ ಹಂಚಲಾಗುವುದಿಲ್ಲ. ಈ **ಎಬಿಎಂ ಇನ್ಫೋಸಿಟಿ ಓನರ್ಸ್ ವೆಲ್‌ಫೇರ್ ಆಸೋಷಿಯೇಷನ್‌ವು ಲಾಭರಹಿತ ಸಂಸ್ಥೆಯಾಗಿದೆ.**

10. ಈ ಜ್ಞಾಪನಾ ಪತ್ರ ಹಾಗೂ ನಿಯಮ ಮತ್ತು ನಿಬಂಧನೆಗಳನ್ನು ಸಲ್ಲಿಸಲು ಹಾಗೂ ಸಂಘಗಳ ನೋಂದಣಾಧಿಕಾರಿಗಳೊಂದಿಗೆ ಪತ್ರ ವ್ಯವಹಾರ ಮಾಡಲು ಸಂಘದ ಅಧ್ಯಕ್ಷರು/ಕಾರ್ಯದರ್ಶಿಗೆ ಪೂರ್ಣ ಅಧಿಕಾರ ನೀಡಲಾಗಿದೆ.

| ಕ್ರ.ಸಂ | ಹೆಸರು | ಸಂಘದ ಹುದ್ದೆ | ಸಹಿ |
|---|---|---|---|
| ೦೧ | ಕೆ.ಪ್ರಕಾಶ್ ರೈ ಬಿನ್ ಸುವರ್ಣ ರೈ | ಅಧ್ಯಕ್ಷರು | |
| ೦೨ | ಜಿತೇಂದ್ರ ಮಲ್ಲಿ<br>ಬಿನ್ ಕೆ. ಉಗ್ಗಪ್ಪ ಮಲ್ಲಿ | ಉಪಾಧ್ಯಕ್ಷರು | |
| ೦೩. | ನಾಗೇಶ್ವರ್ ವಿಜಾಪುರ್<br>ಬಿನ್ ಮಲ್ಲೇಶಪ್ಪ ವಿಜಾಪುರ್. | ಕಾರ್ಯದರ್ಶಿ | |
| ೦೪. | ಮನ್ಸೂರ್ ಕಲತ್ತಿನಾಲ್ ಪಕ್ಕರ್,<br>ಬಿನ್ ಪಕ್ಕರ್ ಕಲತ್ತಿನಾಲ್<br>ಅಹಮ್ಮದ್, | ಖಜಾಂಚಿ | |
| ೦೫ | ಕಾರ್ತಿಕ್ ರಾಮಚಂದ್ರ<br>ಬಿನ್. ಹೆಚ್.ಎ.ರಾಮಚಂದ್ರ | ಜಂಟಿ ಕಾರ್ಯದರ್ಶಿ | |
| ೦೬. | ಪುಷ್ಪರಾಜ್ ಶೆಟ್ಟಿ,<br>ಬಿನ್ ಎನ್. ಜಗನ್ನಾಥ ಶೆಟ್ಟಿ, | ಸಲಹೆಗಾರರು | |
| ೦೭ | ಎಸ್.ಆರ್.ನವೀನ್<br>ಬಿನ್. ಎಸ್. ರಾಧಕೃಷ್ಣ | ನಿರ್ದೇಶಕರು | |
| ೦೮. | ಸ್ಮಿತಾ ಪುಷ್ಪರಾಜ್ ಶೆಟ್ಟಿ<br>ಕೋಂ. ಪುಷ್ಪರಾಜ್ ಶೆಟ್ಟಿ | ನಿರ್ದೇಶಕರು | |
| ೦೯. | ಶ್ರೀಕಾಂತ್.ಕೆ<br>ಲೇ. ಪಿ.ಕೆ.ಉಪಾಧ್ಯಾಯ | ನಿರ್ದೇಶಕರು | |
| ೧೦ | ರೊನಾಲ್ಡ್<br>ಬಿನ್. ಜೋಸೆಫ್ ಮಾರ್ಟೀಸ್, | ನಿರ್ದೇಶಕರು | |

| | | | |
|---|---|---|---|
| ೧೧ | ಮುದ್ದಣ್ಣ. ಹೆಚ್,<br>ಬಿನ್ ಲೇಟ್. ಎಸ್. ಎಂ. ಹಂಪಣ್ಣ, | ನಿರ್ದೇಶಕರು | |
| ೧೨ | ಸತೀಶ್. ಬಿ.ಸಿ.<br>ಬಿನ್ ಬಿ. ಎನ್. ಚಂದ್ರಶೇಖರಯ್ಯ, | ನಿರ್ದೇಶಕರು | |
| ೧೩ | ನಿರ್ಮಲ್ ಕುಮಾರ್<br>ಬಿನ್.ಬಾಬುಲಾಲ್ | ನಿರ್ದೇಶಕರು | |
| ೧೪ | ದಿನೇಶ್ ಹೆಗ್ಡೆ,<br>ಬಿನ್ ರಾಘವ್ ಹೆಗ್ಡೆ, | ನಿರ್ದೇಶಕರು | |
| ೧೫ | ಕಿರಣ್ ಕುಮಾರ್,<br>ಬಿನ್ ಎಂ.ಡಿ. ಹೆಗ್ಡೆ, | ನಿರ್ದೇಶಕರು | |
| ೧೬ | ಶಿವಧ್ವಜ್ ಶೆಟ್ಟಿ,<br>ಬಿನ್ ಕೆ.ಪಿ. ತಿಮ್ಮಪ್ಪ ಶೆಟ್ಟಿ, | ನಿರ್ದೇಶಕರು | |
| ೧೭ | ಅನಿಲ್ ಕುಮಾರ್,<br>ಬಿನ್ ಲೇಟ್. ಪಿ.ಕೆ. ಶಿವರಾವ್, | ನಿರ್ದೇಶಕರು | |

**ಸಾಕ್ಷಿಗಳು :–**

| ಕ್ರಮ ಸಂಖ್ಯೆ | ಹೆಸರು ಮತ್ತು ವಿಳಾಸ<br>ಶ್ರೀಮತಿ/ಶ್ರೀ | ವಯಸ್ಸು | ಉದ್ಯೋಗ | ಸಹಿ |
|---|---|---|---|---|
| ೧ | | | | |
| ೨ | | | | |

# ಎಬಿಎಂ ಇನ್ಫೋಸಿಟಿ ಓನರ್ಸ್ ವೆಲ್‌ಫೇರ್ ಆಸೋಷಿಯೇಷನ್.

ನಂ.೩೮೯, ಎಬಿಎಂ ಇನ್ಫೋಸಿಟಿ ಬಡಾವಣೆ, ವಾರ್ಡ್ ಸಂಖ್ಯೆ ೦೨, ಕಲ್ಲುಗೋಪನಹಳ್ಳಿ ಗ್ರಾಮ, ಬಿಡದಿ ಹೋಬಳಿ, ರಾಮನಗರ ತಾ॥

ಮತ್ತು ಜಿಲ್ಲೆ-೫೬೨೧೦೯

---

## ಆಡಳಿತ ಮಂಡಳಿಯ ಸದಸ್ಯರ ಪಟ್ಟಿ

| ಕ್ರ.ಸಂ | ಹೆಸರು ಮತ್ತು ವಿಳಾಸ<br>ಶ್ರೀಮತಿ/ಶ್ರೀ | ವಯಸ್ಸು | ಸಂಘದ ಹುದ್ದೆ | ವೃತ್ತಿ | ಸಹಿ |
|---|---|---|---|---|---|
| ೦೧ | ಕೆ.ಪ್ರಕಾಶ್ ರೈ<br>ಬಿನ್ ಸುವರ್ಣ ರೈ<br>ನಂ.೩೮೯, ಎಬಿಎಂ ಇನ್ಫೋಸಿಟಿ, ವಾರ್ಡ್ ನಂ.೦೨, ಕಲ್ಲುಗೋಪಹಳ್ಳಿ ಗ್ರಾಮ, ಬಿಡದಿ, ರಾಮನಗರ-೫೬೨೧೦೯ | ೪೬ | ಅಧ್ಯಕ್ಷರು | ವ್ಯಾಪಾರ | |
| ೦೨ | ಜಿತೇಂದ್ರ ಮಲ್ಲಿ<br>ಬಿನ್ ಕೆ. ಉಗ್ಗಪ್ಪ ಮಲ್ಲಿ<br>ಎಫ್-೪೦೪, ರಹೇಜಾ ಪಾರ್ಕ್,<br>ಎ.ಡಿ.ಹಳ್ಳಿ, ಮಾಗಡಿ ರೋಡ್,<br>ಬೆಂಗಳೂರು-೭೯ | ೫೭ | ಉಪಾಧ್ಯಕ್ಷರು | ವ್ಯಾಪಾರ | |
| ೦೩ | ನಾಗೇಶ್ವರ್ ವಿಜಾಪುರ್<br>ಬಿನ್ ಮಲ್ಲೇಶಪ್ಪ ವಿಜಾಪುರ್.<br>ನಂ. ೨೫/೧, ೩ನೇ ಮುಖ್ಯರಸ್ತೆ, ಸಾಕಮ್ಮ ಗಾರ್ಡನ್, ಬಸವನಗುಡಿ,<br>ಬೆಂಗಳೂರು – ೦೪. | ೫೮ | ಕಾರ್ಯದರ್ಶಿ | ವ್ಯಾಪಾರ | |
| ೦೪ | ಮನ್ಸೂರ್ ಕಲತ್ತಿನಾಲ್ ಪಕ್ಕರ್,<br>ಬಿನ್ ಪಕ್ಕರ್ ಕಲತ್ತಿನಾಲ್ ಅಹಮ್ಮದ್,<br>ನಂ. ೧೯, ಫೆರ್ನ್ಸ್ ಹ್ಯಾಬಿಟೆಟ್<br>ಓಆರ್‌ಆರ್, ಫೆರ್ನ್ಸ್ ಐಕಾನ್ ಪಕ್ಕ, ಅಕ್ಮೆ ಬ್ಯಾಲೆಟ್ ಅಪಾರ್ಟ್‌ಮೆಂಟ್,<br>ದೊಡ್ಡಾನೆಕುಂಡಿ, ಬೆಂಗಳೂರು ಉತ್ತರ,<br>ಮಾರತ್ತಹಳ್ಳಿ ಕಾಲೋನಿ,<br>ಬೆಂಗಳೂರು – ೩೭. | ೪೮ | ಖಜಾಂಚಿ | ಸಾಫ್ಟ್‌ವೇರ್ ಇಂಜಿನಿಯರ್ | |
| ೦೫ | ಕಾರ್ತಿಕ್ ರಾಮಚಂದ್ರ<br>ಬಿನ್. ಹೆಚ್.ಎ.ರಾಮಚಂದ್ರ | ೪೪ | ಜಂಟಿ ಕಾರ್ಯದರ್ಶಿ | ವ್ಯಾಪಾರ | |

| | | | | | |
|---|---|---|---|---|---|
| | ೧೩/೨, ೨ನೇ ಮಹಡಿ, ಗಾಯತ್ರಿ<br>ಮ್ಯಾನ್ಷನ್, ಲಾಲ್‌ಭಾಗ್ ರೋಡ್,<br>ಬೆಂಗಳೂರು–೨೭ | | | | |
| ೦ | ಪುಷ್ಪರಾಜ್ ಶೆಟ್ಟಿ,<br>ಬಿನ್ ಎನ್. ಜಗನ್ನಾಥ ಶೆಟ್ಟಿ,<br>ನಂ. ೬೦೩, ಎಸ್‌ಎಲ್‌ಆರ್ ಮ್ಯಾನ್‌ಷನ್,<br>೩ನೇ ಹಂತ, ೧ನೇ ಬ್ಲಾಕ್, ವಾಸವೇಶ್ವರ್<br>ನಗರ್,<br>ಬೆಂಗಳೂರು – ೭೯. | ೬೬ | ಮುಖ್ಯ<br>ಸಲಹೆಗಾರರು | ಕೃಷಿ | |
| ೦ | ಎಸ್.ಆರ್.ನವೀನ್<br>ಬಿನ್. ಎಸ್. ರಾಧಕೃಷ್ಣ<br>ನಂ.೦೩, ಬಿ ಬ್ಲಾಕ್, ಸಿ.ಐ.ಎಲ್<br>ಕಾಲೋನಿ, ಆರ್.ಎಂ.ವಿ. ೨ನೇ ಹಂತ,<br>ಬೆಂಗಳೂರು ೯೪ | ೫೩ | ನಿರ್ದೇಶಕರು | ಸಮಾಜ<br>ಸೇವೆ | |
| ೦ | ಸ್ಮಿತಾ ಪುಷ್ಪರಾಜ್ ಶೆಟ್ಟಿ<br>ಕೋಂ. ಪುಷ್ಪರಾಜ್ ಶೆಟ್ಟಿ<br>ನಂ. ೬೦೩, ಎಸ್‌ಎಲ್‌ಆರ್ ಮ್ಯಾನ್‌ಷನ್,<br>೩ನೇ ಹಂತ, ೧ನೇ ಬ್ಲಾಕ್, ವಾಸವೇಶ್ವರ್<br>ನಗರ್,<br>ಬೆಂಗಳೂರು – ೭೯. | ೫೪ | ನಿರ್ದೇಶಕರು | ಸಮಾಜ<br>ಸೇವೆ | |
| ೦ | ಶ್ರೀಕಾಂತ್.ಕೆ<br>ಲೇ. ಪಿ.ಕೆ.ಉಪಾಧ್ಯಾಯ<br>ನಂ.೧೩೩, ೩ನೇ ಮುಖ್ಯ ರಸ್ತೆ, ೫ನೇ<br>ಅಡ್ಡರಸ್ತೆ, ೬ನೇ ಬ್ಲಾಕ್, ೩ನೇ ಫೇಸ್,<br>ಬನಶಂಕರಿ ೩ನೇ ಹಂತ,<br>ಬೆಂಗಳೂರು–೮೫ | ೬೩ | ನಿರ್ದೇಶಕರು | ನಿವೃತ್ತ ಲೆಕ್ಕ<br>ಪರಿಶೋಧಕರು | |
| ೧ | ರೊನಾಲ್ಡ್<br>ಬಿನ್. ಜೋಸೆಫ್ ಮಾರ್ಟೀಸ್,<br>ನಂ.೪೦೪, ಅವೇ ಮರಿಯ, ೫ನೇ ಕ್ರಾಸ್,<br>ಟಾಟಾನಗರ, ಬೆಂಗಳೂರು–೯೨ | ೫೦ | ನಿರ್ದೇಶಕರು | ಸ್ವ ಉದ್ಯೋಗ | |
| ೧ | ಮುದ್ದಣ್ಣ. ಹೆಚ್,<br>ಬಿನ್ ಲೇಟ್. ಎಸ್. ಎಂ. ಹಂಪಣ್ಣ, | ೭೦ | ನಿರ್ದೇಶಕರು | ನಿವೃತ್ತ ಜಂಟಿ<br>ನಿರ್ದೇಶಕರು | |

| | | | | | |
|---|---|---|---|---|---|
| | ನಂ. ೧೦, ೪ನೇ ಅಡ್ಡರಸ್ತೆ, ಬಾಪೂಜಿ<br>ಲೇಔಟ್, ಬಿಹೆಚ್ಇಎಲ್ ಟೌನ್‌ಶಿಪ್<br>ಹಿಂಭಾಗ, ವಿಜಯನಗರ, ೨ನೇ ಹಂತ,<br>ಬೆಂಗಳೂರು– ೪೦. | | | (ಟಿಆರ್‌ಜಿ) | |
| ೧ | ಸತೀಶ್. ಬಿ.ಸಿ.<br>ಬಿನ್ ಬಿ. ಎನ್. ಚಂದ್ರಶೇಖರಯ್ಯ,<br>ನಂ.೨೦/೧, ಪ್ಲಾಟ್ ನಂ.೬೦, ೪ನೇ ಕ್ರಾಸ್,<br>ಕಾಳಿದಾಸ ಬಡಾವಣೆ, ಶ್ರೀನಗರ,<br>ಬೆಂಗಳೂರು–೫೦ | ೫೪ | ನಿರ್ದೇಶಕರು | ವ್ಯಾಪಾರ | |
| ೧ | ನಿರ್ಮಲ್ ಕುಮಾರ್<br>ಬಿನ್.ಬಾಬುಲಾಲ್<br>ನಂ.೧೫, ಮುತ್ಯಾಲಮ್ಮ ದೇವಸ್ಥಾನ,<br>ಜಿ.ಸ್ಟ್ರೀಟ್, ಶಿವಾಜಿನಗರ, ಬೆಂಗಳೂರು–<br>೦೧ | ೫೬ | ನಿರ್ದೇಶಕರು | ವ್ಯಾಪಾರ | |
| ೧ | ದಿನೇಶ್ ಹೆಗ್ಡೆ,<br>ಬಿನ್ ರಾಘವ್ ಹೆಗ್ಡೆ,<br>ನಂ. ಬಿ–೩೦೫, ಮಂತ್ರಿ ಗ್ರೀನ್ಸ್<br>ಅಪಾರ್ಟ್‌ಮೆಂಟ್, ನಂ. ೦೧, ಸಂಪಿಗೆ<br>ರಸ್ತೆ, ಮಲ್ಲೇಶ್ವರಂ, ಬೆಂಗಳೂರು–೦೩. | ೫೧ | ನಿರ್ದೇಶಕರು | ವ್ಯಾಪಾರ | |
| ೧ | ಕಿರಣ್ ಕುಮಾರ್,<br>ಬಿನ್ ಎಂ.ಡಿ. ಹೆಗ್ಡೆ,<br>ನಂ. ೬೧, ಮಂಗಳ್ ಭವನ್, ೬ನೇ ಕ್ರಾಸ್,<br>೪ನೇ ಮುಖ್ಯರಸ್ತೆ, ಮಹಾಲಕ್ಷ್ಮೀ ಲೇಔಟ್,<br>ಫರ್ಧರ್ ಎಕ್ಸ್‌ಟೆನ್ಶನ್,<br>ಬೆಂಗಳೂರು – ೫೬೦ ೦೮೬. | ೫೯ | ನಿರ್ದೇಶಕರು | ಸ್ವ ಉದ್ಯೋಗ | |
| ೧ | ಶಿವಧ್ವಜ್ ಶೆಟ್ಟಿ,<br>ಬಿನ್ ಕೆ.ಪಿ. ತಿಮ್ಮಪ್ಪ ಶೆಟ್ಟಿ,<br>ನಂ. ೧೨೨೩, ತಿರುಮಲ ವಿಕಾಸ್<br>ಅಪಾರ್ಟ್‌ಮೆಂಟ್, ೪ನೇ ಕ್ರಾಸ್, ೪ನೇ<br>ಮುಖ್ಯರಸ್ತೆ, ೮೦ ಅಡಿ ರಸ್ತೆ, ಚಂದ್ರ<br>ಲೇಔಟ್, ೨ನೇ ಹಂತ, ವಿನಾಯಕ ಆಸ್ಪತ್ರೆ<br>ಹಿಂಭಾಗ, ಬೆಂಗಳೂರು–೪೦ | ೫೦ | ನಿರ್ದೇಶಕರು | ನಟ/ನಿರ್ದೇಶಕರ<br>/ನಿರ್ಮಾಪಕರು | |

| | | | | | |
|---|---|---|---|---|---|
| ೧ | ಅನಿಲ್ ಕುಮಾರ್,<br>ಬಿನ್ ಲೇಟ್. ಪಿ.ಕೆ. ಶಿವರಾವ್,<br>ನಂ. ೬, ೩ನೇ ಕ್ರಾಸ್, ಕುವೆಂಪುನಗರ,<br>ದೊಡ್ಡಕಲ್ಸಂದ್ರ,<br>ಬೆಂಗಳೂರು – ೬೨. | ೫೭ | ನಿರ್ದೇಶಕರು | ವ್ಯಾಪಾರ | |

<u>ಸಾಕ್ಷಿಗಳು :-</u>

| <u>ಕ್ರಮ ಸಂಖ್ಯೆ</u> | <u>ಹೆಸರು ಮತ್ತು ವಿಳಾಸ</u><br><u>ಶ್ರೀಮತಿ/ಶ್ರೀ</u> | <u>ವಯಸ್ಸು</u> | <u>ಉದ್ಯೋಗ</u> | <u>ಸಹಿ</u> |
|---|---|---|---|---|
| ೧ | | | | |
| ೨ | | | | |

# ಎಬಿಎಂ ಇನ್ಫೋಸಿಟಿ ಓನರ್ಸ್ ವೆಲ್‌ಫೇರ್ ಆಸೋಷಿಯೇಷನ್.

ನಂ.೩೮೯, ಎಬಿಎಂ ಇನ್ಫೋಸಿಟಿ ಬಡಾವಣೆ, ವಾರ್ಡ್ ಸಂಖ್ಯೆ ೦೨, ಕಲ್ಲುಗೋಪನಹಳ್ಳಿ ಗ್ರಾಮ, ಬಿಡದಿ ಹೋಬಳಿ, ರಾಮನಗರ ತಾ|| ಮತ್ತು ಜಿಲ್ಲೆ–೫೬೨೧೦೯

---

## <u>ನಿಯಮ ಮತ್ತು ನಿಬಂಧನೆಗಳು</u>

**<u>ಈ ನಿಯಮ ಮತ್ತು ನಿಬಂಧನೆಗಳು ಸಂಘದ ಜ್ಞಾಪನಾ ಪತ್ರದಲ್ಲಿ ನಮೂದಿಸಿರುವ ವಿವಿಧ ಉದ್ದೇಶಗಳನ್ನು ಈಡೇರಿಸುವ ಉದ್ದೇಶದಿಂದ ರಚಿಸಲ್ಪಟ್ಟಿದೆ.</u>**

**೧. ಸಂಘದ ಹೆಸರು :–** **<u>ಎಬಿಎಂ ಇನ್ಫೋಸಿಟಿ ಓನರ್ಸ್ ವೆಲ್‌ಫೇರ್ ಆಸೋಷಿಯೇಷನ್.</u>**

**೨. ಸಂಘದ ವಿಳಾಸ :–** ನಂ.೩೮೯, ಎಬಿಎಂ ಇನ್ಫೋಸಿಟಿ ಬಡಾವಣೆ, ವಾರ್ಡ್ ಸಂಖ್ಯೆ ೦೨, ಕಲ್ಲುಗೋಪನಹಳ್ಳಿ ಗ್ರಾಮ, ಬಿಡದಿ ಹೋಬಳಿ, ರಾಮನಗರ ತಾ|| ಮತ್ತು ಜಿಲ್ಲೆ–೫೬೨೧೦೯

**೩. ಸಂಘದ ಕಾರ್ಯವ್ಯಾಪ್ತಿ :–** ಎಬಿಎಂ ಇನ್ಫೋಸಿಟಿ ಬಡಾವಣೆ, ವಾರ್ಡ್ ಸಂಖ್ಯೆ ೦೨, ಕಲ್ಲುಗೋಪನಹಳ್ಳಿ ಗ್ರಾಮ, ಬಿಡದಿ ಹೋಬಳಿ, ರಾಮನಗರ ತಾ|| ಮತ್ತು ಜಿಲ್ಲೆ–೫೬೨೧೦೯

**೧. ಸಂಘದ ಸದಸ್ಯತ್ವ ಪ್ರವೇಶ ಮತ್ತು ಸದಸ್ಯರ ಹಕ್ಕು ಬಾಧ್ಯತೆಗಳು:–**

1. ಸಂಘದ ಧ್ಯೇಯೋದ್ದೇಶಗಳನ್ನು ಅಂಗೀಕರಿಸಿ, ಸಂಘದೊಡನೆ ಸಕ್ರೀಯವಾಗಿ ಭಾಗವಹಿಸಿ, ಎಬಿಎಂ ಇನ್ಫೋಸಿಟಿ ಬಡಾವನೆಯಲ್ಲಿ ನಿವೇಶನದ ಮಾಲೀಕತ್ವವನ್ನು ಹೊಂದಿರುವ ೧೮ ವರ್ಷ ತುಂಬಿದ ಮಾನಸಿಕವಾಗಿ ಅಸ್ವಸ್ಥನಲ್ಲದ ವ್ಯಕ್ತಿಯು ಸದಸ್ಯತ್ವಕ್ಕೆ ಅರ್ಹರಾಗಿರುತ್ತಾರೆ. ಸದಸ್ಯರಾಗಬಯಸುವವರು ಮತ್ತು ನಿಗದಿಪಡಿಸಿದ ಪ್ರವೇಶ ಶುಲ್ಕವನ್ನು ಪಾವತಿ ಮಾಡಿ ಲಿಖಿತ ರೂಪದಲ್ಲಿ ಅರ್ಜಿ ಸಲ್ಲಿಸಬೇಕು. ಸದರಿ ಅರ್ಜಿಯೊಂದಿಗೆ ವಿಳಾಸ ದೃಢೀಕರಣ, ಭಾವ ಚಿತ್ರ ಹಾಗೂ ಇನ್ನಿತರ ದಾಖಲಾತಿಗಳನ್ನು ಲಗತ್ತಿಸಬೇಕು.
2. ಸದಸ್ಯತ್ವವನ್ನು ನೋಂದಾಯಿಸಲು ರೂಪಾಯಿ ೧೦೦೦/– (ರೂಪಾಯಿ ಒಂದು ಸಾವಿರ ಮಾತ್ರ)ವನ್ನು ಪಾವತಿಸಬೇಕು. ಸದಸ್ಯತ್ವವು ಮರುಪಾವತಿಸಲಾಗದ ಮತ್ತು ವರ್ಗಾವಣೆ ಮಾಡಲಾಗದ ಒಂದು ಬಾರಿಯ ಮೊತ್ತವಾಗಿರುತ್ತದೆ. ನಿವೇಶನವು ಜಂಟೀ ಮಾಲೀಕತ್ವದ ಸಂದರ್ಭದಲ್ಲಿ ಜಂಟೀ ಮಾಲೀಕರು ಒಂದೇ ಕುಟುಂಬದ ಸದಸ್ಯರಾಗಿದ್ದರೆ ಆ ಜಂಟೀ ಮಾಲೀಕರಲ್ಲಿ ಒಬ್ಬರು ಮಾತ್ರ ಸದಸ್ಯತ್ವಕ್ಕೆ ಅರ್ಹರಾಗಿರುತ್ತಾರೆ. ಒಂದುವೇಳೆ ಜಂಟೀ ಮಾಲೀಕರು ಒಂದೇ ಕುಟುಂಬದ ಸದಸ್ಯರಲ್ಲದಿದ್ದಲ್ಲಿ ಇಬ್ಬರೂ ಮಾಲೀಕರು ಸದಸ್ಯತ್ವವನ್ನು ನೋಂದಾಯಿಸಬೇಕು. ಒಂದು ವೇಳೆ ಒಬ್ಬ ವ್ಯಕ್ತಿಯು ಒಂದಕ್ಕಿಂತ ಹೆಚ್ಚು ನಿವೇಶಗಳನ್ನು ಹೊಂದಿದ್ದಲ್ಲಿ ಆ ವ್ಯಕ್ತಿಗೆ ಒಂದು ಸದಸ್ಯತ್ವವನ್ನು

ಮಾತ್ರ ಅನುಮತಿಸಲಾಗುತ್ತದೆ. ಯಾವುದೇ ನಿವೇಶನ ಮಾಲೀಕರು ನಿವೇಷನವನ್ನು ಮಾರಾಟ/ ದಾನಪತ್ರ ಮೂಲಕ ವರ್ಗಾವಣೆ ಮಾಡಿದ ತಕ್ಷಣದಿಂದ ಅವರ ಸದಸ್ಯತ್ವ ರದ್ದಾಗುತ್ತದೆ.

3. ಸದಸ್ಯತ್ವದ ಉದ್ದೇಶಗಳಿಗಾಗಿ ಅಸೋಷಿಯೇಷನ್‌ನ ಆಡಳಿತ ಮಂಡಳಿಯು ಕಾಲಕಾಲಕ್ಕೆ ನಿರ್ಧರಿಸಿದಂತೆ ನಿರ್ವಹಣಾ ಶುಲ್ಕವನ್ನು ಪಾವತಿಸಲು ನಿವೇಶನನದ ಮಾಲೀಕರು ಹೊಣೆಗಾರರಾಗಿರುತ್ತಾರೆ. ನಿವೇಶನ ಮಾಲೀಕರಿಂದ ನಿರ್ವಹಣ ಶುಲ್ಕ ಪಾವತಿಯು ಬಾಕಿ / ವಿಳಂಬವಾಗಿದ್ದರೆ ಅವನು/ಅವಳು ಅಥವಾ ಬಾಡಿಗೆದಾರರು/ ನಿವಾಸಿಗಳು ಅನುಭವಿಸುತ್ತಿರುವ ಸಾಮಾನ್ಯ ಸೌಕರ್ಯ/ ಸೌಲಭ್ಯಗಳ ಸೇವೆಗಳನ್ನು ಅಂತಹ ಸದಸ್ಯರಿಗೆ ಬಾಕಿ ಪಾವತಿಯಾಗುವವರೆಗೆ ಬಳಸಲು ಅವಕಾಶವಿರುವುದಿಲ್ಲ.

4. ನಿವೇಶನ ಮಾಲೀಕರು ತನ್ನ ಯಾವುದೇ ನಿವೇಶನದ ಮಾರಾಟ ಅಥವಾ ಬಾಡಿಗೆಗೆ ನೀಡುವ ಸಂದರ್ಭದಲ್ಲಿ ನೂತನ ಮಾಲೀಕ/ಬಾಡಿಗೆದಾರನ ಮಾಹಿತಿಯನ್ನು ಲಿಕಿತವಾಗಿ ಚುನಾಯಿತ ಆಡಳಿತ ಮಂಡಳಿಗೆ ಸಲ್ಲಿಸಬೇಕು. ನಿವೇಶನದ ಮಾಲೀಕತ್ವ ವರ್ಗಾವಣೆಯನ್ನು ಮಾರಾಟ/ದಾನಪತ್ರ ಮತ್ತು ಬಾಡಿಗೆ ಅಥವಾ ಭೋಗ್ಯಕ್ಕೆ ನೀಡುವ ಮೊದಲು ಅಸೋಷಿಯೇಷನ್ ನಿಗಧಿಪಡಿಸಿರುವ ನಿರ್ವಹಣಾ ಶುಲ್ಕಗಳ ಬಾಕಿ ಮೊತ್ತವನ್ನು ಪಾವತಿಸಿ ಅಸೋಷಿಯೇಷನ್‌ನ ಕಾರ್ಯದರ್ಶಿಯಿಂದ ನಿರಾಪೇಕ್ಷಣಾ ಪತ್ರವನ್ನು (ಎನ್.ಓ.ಸಿ) ಪಡೆದುಕೊಳ್ಳಬೇಕು ಮತ್ತು ನೂತನ ಮಾಲೀಕರ ಕ್ರಯ/ ಕರಾರು/ ದಾನ/ಭೋಗ್ಯದ ಪತ್ರಗಳ ಪ್ರತಿಯನ್ನು ಅಸೋಷಿಯೇಶನಿಗೆ ಸಲ್ಲಿಸಬೇಕು ಮತ್ತು ಸದಸ್ಯತ್ವ ಕಾರ್ಡ್‌ನ್ನು ಹಿಂದಿರುಗಿಸಬೇಕು. ಆನಂತರವೇ ಹೊಸ ಮಾಲೀಕತ್ವ ಹೊಂದಿರುವ ವ್ಯಕ್ತಿಯಿಂದ ಸದಸ್ಯತ್ವ ಶುಲ್ಕ ರೂ.೧೦೦೦/-(ಒಂದು ಸಾವಿರ ರೂಪಾಯಿ) ಗಳನ್ನು ಪಡೆದ ನಂತರ ಬೈಲಾದ ಸದಸ್ಯತ್ವ ಪ್ರವೇಶ ನಿಯಮದಂತೆ ನೂತನ ಸದಸ್ಯತ್ವ ನೀಡಲಾಗುವುದು.

5. ನಿವೇಶನ ಮಾಲೀಕನು/ರು ಒಂದು ವೇಳೆ ಮರಣ ಹೊಂದಿದರೆ ಅವನ/ಅವಳ/ಅವರ ಸದಸ್ಯತ್ವವನ್ನು ಅವರ ಕುಟುಂಬದ ವ್ಯಕ್ತಿಗೆ ವರ್ಗಾಯಿಸಲಾಗುತ್ತದೆ. ಒಂದು ವೇಳೆ ನಿವೇಶನವನ್ನು ನಿರ್ಧಿಷ್ಟವಾಗಿ ಯಾವುದೇ ವ್ಯಕ್ತಿಗೆ ಮಾಡದಿದ್ದ ಪಕ್ಷದಲ್ಲಿ ಅಸೋಷಿಯೇಷನ್‌ನ ಕಾರ್ಯದರ್ಶಿಯಿಂದ ನಿರ್ವಹಿಸಲ್ಪಡುವ ನಿವೇಶನ ಮಾಲೀಕರ ನೋಂದಣಿಯಲ್ಲಿ ಅನುವಂಶಿಕವಾಗಿ ಕಾನುನು ಬದ್ಧ ಪ್ರತಿನಿಧಿಗಳ ಅಥವಾ ಹಕ್ಕನ್ನು ಪಡೆಯುವ ವ್ಯಕ್ತಿಯ ಹೆಸರನ್ನು ನಮೂದಿಸಲಾಗುವುದು. ಅಂತಹ ಸಂದರ್ಭದಲ್ಲಿ ನೋಂದಣಿಯಲ್ಲಿ ನಮೂದಿಸಿದ ಮಾಲೀಕ/ಜಂಟೀ ನಿವೇಶನ ಮಾಲೀಕರಲ್ಲಿ ಮೊದಲ ಕಾನೂನು ಪ್ರತಿನಿಧಿಯು ಸಭೆಯಲ್ಲಿ ಭಾಗವಹಿಸುವ ಮತ್ತು ಮತದಾನದ ಹಕ್ಕಿಗೆ ಅರ್ಹರಾಗಿರುತ್ತಾರೆ.

6. ಎಬಿಎಂ. ಇನ್ಫೋಸಿಟಿ ಬಡಾವಣೆಯ ನಿವೇಶನ ಮಾಲೀಕರು/ಬಾಡಿಗೆ ದಾರರು/ ಭೋಗ್ಯದಾರರು ಎಬಿಎಂ ಇನ್ಫೋಸಿಟಿ ಓನರ್ಸ್ ವೆಲ್‌ಫೇರ್ ಅಸೋಷಿಯೇಷನ್ ಬೈಲಾಗಳ ಆಡಳಿತಾತ್ಮಕ ನಿಯಮಗಳಿಗೆ ಒಳಪಟ್ಟಿರುತ್ತಾರೆ. ವಸತಿಗಾಗಿ ಹೆಚ್ಚುತ್ತಿರುವ ಬೇಡಿಕೆಗಳನ್ನು ಪೂರೈಸಲು ಎಬಿಎಂ. ಇನ್ಫೋಸಿಟಿ ಬಡಾವಣೆ ನಿರ್ಮಾಣವಾಗಿದೆ ಮತ್ತು ಮಾಲೀಕರಿಗೆ ಅನುವಂಷಿಕವಾಗಿ/ ಮಾರಾಟದ ಮೂಲಕ ವರ್ಗಾಯಿಸಬಹುದಾದ ಸ್ಥಿರಾಸ್ತಿಯನ್ನು ಒದಗಿಸಿದೆ. ಎಬಿಎಂ. ಇನ್ಫೋಸಿಟಿ ಬಡಾವಣೆ ನಿವೇಶನದಾರರ ಪರಸ್ಪರ ಸಹಕಾರ ಮತ್ತು ಸೌಹಾರ್ದತೆಯಿಂದ ವಿಶೇಷ ಸಮುದಾಯವಾಗಿ ಮಾರ್ಪಡುತ್ತದೆ. ಎಲ್ಲಾ ಸದಸ್ಯರಿಂದ ಸಂಪೂರ್ಣ ಸಹಕಾರ ಪಡೆದರೆ ಮಾತ್ರ ಚುನಾಯಿತ ಆಡಳಿತ ಮಂಡಳಿ ಕಾರ್ಯನಿರ್ವಹಿಸಲು ಸಾದ್ಯವಾಗುತ್ತದೆ. ಆದ್ಯರಿಂದ ನಿವೇಶನ/ಬಾಡಿಗೆದಾರರು ಅಸೋಷಿಯೇಷನ್‌ನ ನಿಯಮ ಮತ್ತು ನಿಬಂಧನೆಗಳನ್ನು ಕಟ್ಟುನಿಟ್ಟಾಗಿ ಅನುಸರಿಸಲು ಜವಾಬ್ದಾರರಾಗಿರುತ್ತಾರೆ.

7. ಎಬಿಎಂ. ಇನ್ಫೋಸಿಟಿ ಬಡಾವಣೆಯ ಎಲ್ಲಾ ಸಾಮಾನ್ಯ ಸೌಲಭ್ಯ/ ಸೇವೆಗಳನ್ನು ಪೂರೈಸಲು ನಿವೇಶನದಾರ/ಬಾಡಿಗೆದಾರ/ಭೋಗ್ಯದಾರರು ಅಸೋಷಿಯೇಷನ್‌ನ ಆಡಳಿತ ಮಂಡಳಿಯು ನಿಗದಿ ಪಡಿಸಿದ ಶುಲ್ಕ/ ಭದ್ರತಾ ಠೇವಣಿ/ಮಾಸಿಕ ನಿರ್ವಹಣಾ ಶುಲ್ಕ/ ಇತರ ಆಡಳಿತಾತ್ಮಕ ಶುಲ್ಕವನ್ನು ನಿಗಧಿತ ದಿನಾಂಕದೊಳಗೆ ಅಸೋಷಿಯೇಶನ್‌ಗೆ ಪಾವತಿಸಬೇಕು.
8. ಎಬಿಎಂ. ಇನ್ಫೋಸಿಟಿ ಬಡಾವಣೆಯನ್ನು ವಸತಿ ಉದ್ದೇಶಗಳಿಗಾಗಿ ಮಾತ್ರ ಬಳಸಬೇಕು. ಯಾವುದೇ ಮಾಲೀಕರು/ ನಿವಾಸಿಗಳು ಬಡಾವಣೆಯ ಸಾಮಾನ್ಯ ಪ್ರದೇಶಗಳನ್ನು ವಾಣಿಜ್ಯ ಉದ್ದೇಶ/ಕಛೇರಿ/ಅಂಗಡಿ/ಅತಿಥಿ ಗೃಹಗಳಾಗಿ ಬಳಸುವಂತಿಲ್ಲ. ಅಶೋಷಿಯೇಷನ್‌ನ ಚುನಾಯಿತ ಆಡಳಿತ ಮಂಡಳಿಯ ಪೂರ್ವಾನುಮತಿಯಿಲ್ಲದೇ ಬಡಾವಣೆಯ ಸಾಮಾನ್ಯ ಪ್ರದೇಶಗಳಲ್ಲಿ ಯಾವುದೇ ಜಾಹಿರಾತು/ಸೂಚನೆಗಳನ್ನು ಪ್ರಕಟಿಸುವಂತಿಲ್ಲ. ಆಡಳಿತ ಮಂಡಳಿಯು ಯಾವುದೇ ಕಾರ್ಯಕ್ರಮಕ್ಕೆ ನಿಧಿ ಸಂಗ್ರಹಣೆಗೆ ಸೂಚನೆಗಳನ್ನು ನೀಡಲಾಗುವುದಿಲ್ಲ.
9. ಎಬಿಎಂ. ಇನ್ಫೋಸಿಟಿ ಬಡಾವಣೆಯ ನಿವಾಸಿಗಳು ಹೊಂದಿರುವ ಸಾಕುಪ್ರಾಣಿಗಳನ್ನು ಸಾಮಾನ್ಯ ಪದೇಶಗಳಲ್ಲಿ ಮಲವಿಸರ್ಜನೆ ಮಾಡಲು ಅನುಮತಿಸಲಾಗುವುದಿಲ್ಲ. ಸಾಕುಪ್ರಾಣಿ ಮಾಲೀಕರು ತಮ್ಮ ಸಾಕಿಪ್ರಾಣಿಗಳು ಇತರ ನಿವಾಸಿಗಳಿಗೆ ಯಾವುದೇ ಅಪಾಯವನ್ನು ಉಂಟುಮಾಡುವುದಿಲ್ಲವೆಂದು ಖಚಿತಪಡಿಸಿಕೊಳ್ಳಬೇಕು. ಒಂದುವೇಳೆ ಸಾಕು ಪ್ರಾಣಿಗಳಿಂದ ಯಾವುದೇ ನಿವಾಸಿ/ಅತಿಥಿ/ ಬಡಾವಣೆಯ ಸಿಬ್ಬಂಧಿಗಳಿಗೆ ಹಾನಿ ಅಥವಾ ತೊಂದರೆ ಉಂಟಾದಲ್ಲಿ ಉದ್ಭವಿಸಬಹುದಾದ ಸಮಸ್ಯೆಗಳಿಗೆ ಸಾಕುಪ್ರಾಣುಗಳ ಮಾಲೀಕರೇ ನೇರ ಹೊಣೆಗಾರರಾಗಿರುತ್ತಾರೆ.
10. ಮನೋರಂಜನಾ ಸೌಲಭ್ಯಗಳಿಗೆ ಸುರಕ್ಷತೆಯ ಜವಾಬ್ದಾರಿಯು ಬಳಕೆದಾರನ ವೈಯಕ್ತಿಕ ಹೊಣೆಯಾಗಿರುತ್ತದೆ ಮತ್ತು ಅಸೋಷಿಯೇಷನ್ ಯಾವುದೇ ಸುರಕ್ಷತೆಯ ಜವಾಬ್ದಾರಿಯನ್ನು ವಹಿಸಿಕೊಳ್ಳುವುದಿಲ್ಲ. ಅಸೋಷಿಯೇಷನ್‌ವು ಮನೋರಂಜನಾ ಸೌಲಭ್ಯಗಳಿಗೆ ಜೀವರಕ್ಷಕರು/ತರಬೇತುದಾರರು/ಮಾರ್ಗದರ್ಶಿಗಳ ನೀಯೋಜನೆಯ ಜವಾಬ್ದಾರಿಯನ್ನು ವಹಿಸಿಕೊಳ್ಳುವುದಿಲ್ಲ. ಸಾಮಾನ್ಯ ಸುರಕ್ಷತೆ, ಲಿಫ್ಟ್, ಕಾರೀಡಾರ್, ಮೆಟ್ಟಿಲು, ಕಾರ್ ಪಾರ್ಕಿಂಗ್ ಪ್ರದೇಶಗಳಂತ ಬಡಾವಣೆಯ ಆವರಣದ ಬಳಕೆಯಲ್ಲಿ ಸುರಕ್ಷತೆಯ ಜವಾಬ್ದಾರಿಯು ಪ್ರತಿಯೊಬ್ಬ ನಿವಾಸಿಗಳ ಹೊಣೆಯಾಗಿರುತ್ತದೆ.
11. ಕಾರು ನಿಲುಗಡೆ ಮತ್ತು ಕಾರೀಡರ್‌ಗಳಂತ ಸಾಮನ್ಯ ಪ್ರದೇಶಗಳಲ್ಲಿ ನಿವಾಸಿಗಳ ಅನುಕೂಲವನ್ನು ಪರಿಗಣಿಸದೆ ಯಾವುದೇ ಆಟ/ಚಟುವಟಿಕೆಗಳನ್ನು ನಿಶೇಧಿಸಲಾಗುವುದು. ವಾಹನಗಳನ್ನು ನಿಗಧಿ ಪಡಿಸಿದ ಸ್ಥಳದಲ್ಲಿ ನಿಲ್ಲಿಸಬೇಕು ಮತ್ತು ಇತರ ವಾಹನಗಳ ಚಲಾವಣೆಗೆ ಅಡ್ಡಿಯಾಗದಂತೆ ನಿಲ್ಲಿಸಬೇಕು.
12. ಎಬಿಎಂ. ಇನ್ಫೋಸಿಟಿ ಬಡಾವಣೆಯ ಸಾಮಾನ್ಯ ಪ್ರದೇಶಗಳಲ್ಲಿ ಮಧ್ಯಪಾನ ಮತ್ತು ಧೂಮಪಾನವನ್ನು ನಿಷೇಧಿಸಲಾಗಿದೆ. ಸಾಮಾನ್ಯ ಪ್ರದೇಶಗಳಲ್ಲಿ ಅತಿಕ್ರಮಣ ಪ್ರವೇಶಕ್ಕೆ ಅನುಮತಿ ಇರುವುದಿಲ್ಲ.
13. ಭದ್ರತಾ ಸಿಬ್ಬಂದಿ/ಕಛೇರಿ ಸಿಬ್ಬಂಧಿ/ನಿಗಧಿಪಡಿಸಿದ ಕಾರ್ಮಿಕರು ಚುನಾಯಿತ ಆಡಳಿತ ಮಂಡಳಿ ನೀಡಿರುವ ಕರ್ತವ್ಯಗಳನ್ನು ನಿರ್ವಹಿಸಬೇಕು. ಪ್ರತಿಯೊಬ್ಬ ಮಾಲೀಕರ ನಿವೇಶನದ ನಿರ್ವಹಣೆ/ ದುರಸ್ಥಿ ಕಾರ್ಯಗಳನ್ನು ಸ್ವತಃ ಕೈಗೊಳ್ಳಬೇಕು ಮತ್ತು ಇತರ ನಿವೇಶನದಾರರಿಗೆ ಹಾನಿ ಅಥವಾ ತೊಂದರೆ ಆಗದಂತೆ ನಿರ್ವಹಿಸಬೇಕು. ಒಂದು ವೇಳೆ ಹಾನಿ ಉಂಟಾದಲ್ಲಿ ಉಂಟಾಗುವ ಹಾನಿ ಮತ್ತು ಹೊಣೆಗಾರಿಕೆಗಳಿಗೆ ಅವರೇ ಹೊಣೆಗಾರರಾಗಿರುತ್ತಾರೆ.
14. ಮಾಲೀಕರು/ಬಾಡಿಗೆದಾರರು ಆಡಳಿತ ಮಂಡಳಿಯ ಸದಸ್ಯರಿಗೆ ಅವರ ನಿವೇಷನ/ ಘಟಕದಲ್ಲಿ ಯಾವುದೇ ತುರ್ತು ಪರಿಸ್ಥಿತಿ ಉದ್ಭವಿಸಿದಲ್ಲಿ ಮಾಲೀಕರು ಇದ್ದರೂ ಇಲ್ಲದಿದ್ದರೂ ಮಧ್ಯ ಪ್ರವೇಶಿಸಿ ಸಮಸ್ಯೆಯನ್ನು ಬಗೆಹರಿಸುವ ಅಧಿಕಾರವನ್ನು ಹೊಂದಿರುತ್ತಾರೆ.

15. ಕಸವಿಲೇವಾರಿಯನ್ನು ಮುಚ್ಚಿದ ಚೀಲಗಳಲ್ಲಿ ನಿಗಧಿ ಪಡಿಸಿದ ಜಾಗದಲ್ಲಿ ಸಂಬಂಧಪಟ್ಟ ಸರ್ಕಾರದ ಇಲಾಖೆಗಳ ಸೂಚನೆಯಂತೆ ಇರಿಸಬೇಕು. ಯಾವುದೇ ಮಾಸಿಕ ಶುಲ್ಕ ಒಳಗೊಂಡಿದ್ದರೆ ಅದನ್ನು ಮಾಸಿಕ ನಿರ್ವಹಣಾ ಶುಲ್ಕದೊಂದಿಗೆ ಸಂಗ್ರಹಿಸಲಾಗುವುದು.
16. ದಿನಚರಿಯ ಮೇಲೆ ಪರಿಣಾಮ ಬೀರುವ ಆಡಳಿತಾತ್ಮಕ ನಿಯಮ ಮತ್ತು ನಿಬಂಧನೆಗಳನ್ನು ಆಡಳಿತ ಮಂಡಳಿಯಿಂದ ನೀಡಲಾಗುವುದು ಮತ್ತು ಸಮಯ, ಸಂದರ್ಭಗಳು ಮತ್ತು ಸಮಕಾಲೀನ ಘಟನೆಗಳ ಪ್ರಗತಿಗೆ ಅನುಗುಣವಾಗಿ ಕಾಲಕಾಲಕ್ಕೆ ತಿದ್ದುಪಡಿ ಮಾಡಲಾಗುವುದು. ನಿರ್ವಹಣಾ ಶುಲ್ಕಗಳು, ಮನರಂಜನಾ ಸೌಲಭ್ಯಗಳ ಬಳಕೆ ನಿಯಮಗಳು, ಕ್ಲಬ್‌ಹೌಸ್, ನೀರು, ವಿದ್ಯುತ್ ಬಳಕೆ ಮತ್ತು ಬಡಾವಣೆಯ ಇತರ ಸಂಪನ್ಮೂಲಗಳ ಬಳಕೆಯ ಪ್ರಮುಖ ಅಂಶಗಳನ್ನು ಹೊಂದಿರುವ ಜ್ಞಾಪನಾ ಪತ್ರವನ್ನು ಪ್ರತಿಯೊಬ್ಬ ಸದಸ್ಯರುಗಳಿಗೆ ನೀಡಲಾಗುವುದು.

**೨. ಸದಸ್ಯತ್ವವನ್ನು ತೆಗೆದು ಹಾಕುವುದು ಮತ್ತು ಅದರ ವಿಧಾನ :–**

1. ಅಸೋಷಿಯೇಷನ್‌ನ ಸದಸ್ಯನು ಮರಣ ಹೊಂದಿದರೆ, ಮಾನಸಿಕ ಅಸ್ವಸ್ಥನಾದರೆ, ಸದಸ್ಯತ್ವದಿಂದ ವಜಾ ಮಾಡಲ್ಪಟ್ಟಿದ್ದರೆ, ರಾಜೀನಾಮೆ ಕೊಟ್ಟರೆ, ಕಾನೂನು ಪ್ರಕಾರ ಅನರ್ಹ ವ್ಯಕ್ತಿಯಂದು ಘೋಷಿಸಲ್ಪಟ್ಟಿದ್ದು ಕಂಡುಬಂದರೆ ಅಂತಹ ವ್ಯಕ್ತಿಯ ಸಂಘದ ಸದಸ್ಯತ್ವವು ರದ್ದಾಗುತ್ತದೆ.
2. ಅಸೋಷಿಯೇಷನ್‌ನ ಯಾವುದೇ ಸದಸ್ಯನು ಸಂಘದ ಉದ್ದೇಶಗಳಿಗೆ ವಿರುದ್ಧವಾಗಿ ಅಥವಾ ಸಂಘದ ಹಿತಾಸಕ್ತಿಗೆ ಧಕ್ಕೆ ಮಾಡಿದ್ದಲ್ಲಿ ಅಥವಾ ಕರ್ತವ್ಯಲೋಪ ಎಸಗಿರುತ್ತಾರೆಂದು ಕಂಡುಬಂದಲ್ಲಿ ಅಥವಾ ಹಣ ದುರುಪಯೋಗ ಮತ್ತು ಇತರೆ ಯಾವುದೇ ಆರೋಪಗಳು ಸಾಭೀತಾದಲ್ಲಿ/ ಶಿಕ್ಷೆಗೊಳಪಟಲ್ಲಿ ಅಂತಹ ಸದಸ್ಯನ ವಿರುದ್ಧ ದೋಷಾರೋಪಣೆಯನ್ನು ತಯಾರಿಸಿ ಅದನ್ನು ಸದಸ್ಯನಿಗೆ ನೋಂದಾಯಿತ ಅಂಚೆ ಮೂಲಕ ಕನಿಷ್ಠ ೦೭ ದಿವಸಗಳ ಅವಕಾಶ ನೀಡಿ, ವಿವರಣೆ ಪಡೆದು ಆಡಳಿತ ಮಂಡಳಿಯ ಸಭೆಯಲ್ಲಿ ಬಹುಮತದ ಮೇಲೆ ಸದಸ್ಯತ್ವವನ್ನು ಅಂಗೀಕರಿಸಬಹುದು ಅಥವಾ ಸಕಾರಣಗಳನ್ನು ನೀಡಿ ವಜಾ ಮಾಡಬಹುದು. ಈ ರೀತಿ ತೆಗೆದು ಹಾಕಿದ ಸದಸ್ಯನು ಸರ್ವ ಸದಸ್ಯರ ಸಭೆಗೆ ಮೇಲ್ಮನವಿ ಸಲ್ಲಿಸಬಹುದು ಹಾಗೂ ಸದರಿ ಸಭೆಯ ನಿರ್ಣಯವೇ ಅಂತಿಮವಾಗಿರುತ್ತದೆ.
3. ಸದಸ್ಯತ್ವದಿಂದ ತೆಗೆದು ಹಾಕಲ್ಪಟ್ಟ ವ್ಯಕ್ತಿಯು ತೆಗೆದು ಹಾಕಿದ ದಿನದಿಂದ ಒಂದು ವರ್ಷದವರೆಗೆ ಈ ಸಂಘದ ಸದಸ್ಯನಾಗಿ ಮರುಪ್ರವೇಶ ಪಡೆಯಲು ಅನರ್ಹನಾಗಿರತಕ್ಕದ್ದು.

**೩. ಆಡಳಿತ ಮಂಡಳಿ ರಚನೆ, ಪದಾಧಿಕಾರಿಗಳ ಸಂಖ್ಯೆ, ಅವಧಿ, ಕರ್ತವ್ಯಗಳು ಮತ್ತು ಅಧಿಕಾರಗಳು :–**

1. ಅಧಿನಿಯಮ ಹಾಗೂ ನಿಯಮ ಮತ್ತು ನಿಬಂಧನೆಗಳಿಗೊಳಪಟ್ಟು ಅಸೋಷಿಯೇಷನ್‌ನ ಆಡಳಿತ ಮತ್ತು ಅಸೋಷಿಯೇಷನ್‌ನ ಕಾರ್ಯ ಚಟುವಟಿಕೆಗಳನ್ನು ನಿರ್ವಹಿಸಲು ಸಾಮಾನ್ಯ ಸಭೆಯಿಂದ ಚುನಾಯಿತರಾದ ಒಟ್ಟು ೧೭ ಜನ ಸದಸ್ಯರನ್ನೊಳಗೊಂಡ ಆಡಳಿತ ಮಂಡಳಿಯು ಅಧ್ಯಕರು, ಉಪಾಧ್ಯಕ್ಷರು, ಕಾರ್ಯದರ್ಶಿ, ಖಜಾಂಚಿ, ಜಂಟಿ ಕಾರ್ಯದರ್ಶಿ ಮತ್ತು ಇನ್ನುಳಿದಂತೆ ನಿರ್ದೇಶಕರು ಇರತಕ್ಕದ್ದು.

2. ಜ್ಞಾಪನಾ ಪತ್ರದಲ್ಲಿ ಸಹಿ ಮಾಡಿರುವ ಸದಸ್ಯರು ಆಡಳಿತ ಮಂಡಳಿಯ ಪ್ರಥಮ ಸದಸ್ಯರಾಗಿರುತ್ತಾರೆ. ಮುಂದಿನ ೩ ವರ್ಷ ಅವಧಿಗೆ ಅವರು ಮುಂದುವರಿಯುತ್ತಾರೆ.
3. ಮುಂದಿನ ಆಡಳಿತ ಮಂಡಳಿಯ ಪದಾಧಿಕಾರಿಗಳನ್ನು ಚುನಾವಣೆಯ ಮೂಲಕ ಚುನಾಯಿಸುವುದು.
4. ಆಡಳಿತ ಮಂಡಳಿಯ ಅಧಿಕಾರವಧಿಯು ೦೩ ವರ್ಷಗಳಾಗಿರತಕ್ಕದ್ದು.
5. ಆಡಳಿತ ಮಂಡಳಿಯ ಸದಸ್ಯರು ಮತ್ತು ಕಾರ್ಯಕಾರಿ ಸಮಿತಿಯ ಸದಸ್ಯರಾಗಿ ಆಯ್ಕೆಯಾಗಲು ಸದಸ್ಯತ್ವವನ್ನು ಹೊಂದಿರುವ ನಿವೇಶನ ಮಾಲೀಕರು ಮಾತ್ರ ಅರ್ಹರಾಗಿರುತ್ತಾರೆ.
6. ಅಸೋಷಿಯೇಷನ್‌ನ ಆಡಳಿತ ವರ್ಷವು ಏಪ್ರಿಲ್–೦೧ ರಿಂದ ಮಾರ್ಚ್–೩೧ ರವರೆಗೆ ಇರುತ್ತದೆ.
7. ವರ್ಷದ ಯಾವುದೇ ಮಾಹೆಯಲ್ಲಿ ಆಡಳಿತ ಮಂಡಳಿ ಅಸ್ತಿತ್ವಕ್ಕೆ ಬಂದರೂ ಸಹ ಸದರಿ ಅವಧಿಯನ್ನು ವರ್ಷವೆಂದು ಪರಿಗಣಿಸತಕ್ಕದ್ದು.
8. ಆಯ್ಕೆಯಾದ ಆಡಳಿತ ಮಂಡಳಿಯ ಅವಧಿಯು ಕೊನೆಯ ದಿನದ ಮಧ್ಯಾಹ್ನ ಅಥವಾ ಅವಧಿಯ ಮೊದಲ ದಿನದ ಪೂರ್ವಾಹ್ನದಂದು ಅಧಿಕಾರ ವಹಿಸಿಕೊಳ್ಳಬೇಕು.
9. ಆಡಳಿತ ಮಂಡಳಿ ಚುನಾವಣೆಗೆ ವ್ಯವಸ್ಥೆ ಮಾಡುವುದು ಹಾಗೂ ಪದಾಧಿಕಾರಿಗಳನ್ನು ಚುನಾಯಿಸುವುದು.
10. ಅಸೋಷಿಯೇಷನ್‌ನ ಧ್ಯೇಯೋದ್ದೇಶಗಳನ್ನು ಈಡೇರಿಸಲು ಸದಸ್ಯರಿಂದ, ದಾನಿಗಳಿಂದ, ಸರ್ಕಾರ, ಸರ್ಕಾರೇತರ ಸಂಘ ಸಂಸ್ಥೆಗಳಿಂದ ಧನ ಸಹಾಯ, ಕೊಡುಗೆ, ಸಾಲ, ಅನುದಾನ, ದತ್ತಿ ಇತ್ಯಾಧಿಗಳನ್ನು ಸ್ವೀಕರಿಸುವ ಅಧಿಕಾರವಿರುತ್ತದೆ. ಆದರೆ ಪ್ರತಿಯೊಂದು ವಿಭಾಗಕ್ಕೆ ಪ್ರತ್ಯೇಕವಾಗಿ ವಹಿಯನ್ನು ನಿರ್ವಹಿಸಲು ಸೂಕ್ತ ಕ್ರಮ ಕೈಗೊಳ್ಳತಕ್ಕದ್ದು. ಹಾಗೂ ಇನ್ನಿತರೆ ಅಗತ್ಯ ಯೋಜನೆಗಳನ್ನು ರೂಪಿಸಿಕೊಳ್ಳುವುದು.
11. ಅಸೋಷಿಯೇಷನ್‌ನ ಕಛೇರಿ ಮತ್ತು ಶಾಖೆಯ ಕಾರ್ಯಚಟುವಟಿಕೆಗಳ ಮೇಲ್ವಿಚಾರಣೆ ಮಾಡುವುದು.
12. ಆಡಳಿತ ವರದಿಯನ್ನು ಪರಿಶೀಲಿಸುವುದು ಮತ್ತು ಅದರಲ್ಲಿ ಸೂಚಿಸಿರುವ ಸಲಹೆ ಸೂಚನೆ, ನ್ಯೂನ್ಯತೆಗಳ ಬಗ್ಗೆ ಕ್ರಮ ಕೈಗೊಳ್ಳುವುದು. ಹಾಗೂ ಕೈಗೊಂಡ ಕ್ರಮದ ಬಗ್ಗೆ ವರದಿಯನ್ನು ಮುಂದಿನ ಸಾಮಾನ್ಯ ಸಭೆಯ ಮುಂದೆ ಮಂಡಿಸುವುದು.
13. ಅಸೋಷಿಯೇಷನ್ ಸೇರಿದ ನಿರುಪಯೋಗಿ ವಸ್ತುಗಳನ್ನು ದಾಸ್ತಾನು ಪಟ್ಟಿಯಿಂದ ತೆಗೆದು ಹಾಕುವುದು ಅಥವಾ ವಿಲೇವಾರಿ ಮಾಡುವುದು.
14. ಅಸೋಷಿಯೇಷನ್‌ನ ಯಾವುದೇ ಹಣಕಾಸಿನ ಠೇವಣಿ, ಖರ್ಚು ಇತ್ಯಾದಿಗಳ ಬಗ್ಗೆ ಆಡಳಿತ ಮಂಡಳಿಯ ಅನುಮೋದನೆ ಪಡೆಯದ ಹೊರತು ವಿನಿಯೋಗಿಸುವುದಾಗಲಿ ಅಥವಾ ಖರ್ಚು ಮಾಡತಕ್ಕದ್ದಲ್ಲ.
15. ಅಸೋಷಿಯೇಷನ್‌ನ ದಿನಚರಿಯಲ್ಲಿ ಬರುವ ಖರ್ಚುಗಳನ್ನು ಮಂಜೂರು ಮಾಡುವುದು ಅಥವಾ ಈ ಅಧಿಕಾರವನ್ನು ಸೂಕ್ತ ಅಧಿಕಾರಿಗಳಿಗೆ ಮಿತಿಗೊಳಪಟ್ಟು ಹಸ್ತಾಂತರಿಸುವುದು.

16. ಆಡಳಿತ ಮಂಡಳಿಯಲ್ಲಿ ಯಾವುದೇ ಸದಸ್ಯನಿಂದ ನಿಯಮ ೭(೪)ರ ಪ್ರಕಾರ ಅಥವಾ ತಿಳುವಳಿಕೆ ನೀಡಿದರೂ ಸಹ ಸತತವಾಗಿ ಗೈರುಹಾಜರಾಗಿ ತೆರವಾದ ಆ ಸ್ಥಾನಕ್ಕೆ ಸದಸ್ಯರಲ್ಲಿ ಬೇರೆ ಯಾರನ್ನಾದರೂ ಆಡಳಿತ ಮಂಡಳಿ ಸದಸ್ಯರ ಬಹುಮತ ನಿರ್ಣಯದ ಮೇರೆಗೆ ನೇಮಿಸಿಕೊಳ್ಳಲು ಅಧಿಕಾರವಿರುತ್ತದೆ.

17. ಸಿಬ್ಬಂದಿಯ ಬಡ್ತಿ, ತರಬೇತಿ ಹಾಗೂ ಆಡಳಿತ ಮಂಡಳಿಯಿಂದ ರಚಿತವಾಗಿ ಸಾಮಾನ್ಯ ಸಭೆಯಿಂದ ಮಂಜೂರಾದ ನೌಕರರ ಸೇವಾ ನಿಯಮಗಳ ಪ್ರಕಾರ ತಪ್ಪಿತಸ್ಥ ಸಿಬ್ಬಂದಿಯವರ ಮೇಲೆ ಅಗತ್ಯ ಶೀಘ್ರ ಕ್ರಮಜರುಗಿಸುವುದು.

18. ದೂರುಗಳನ್ನು ಸ್ವೀಕರಿಸುವುದು ಮತ್ತು ವಿಲೇ ಮಾಡಲು ಸೂಕ್ತ ಕ್ರಮ ಕೈಗೊಳ್ಳುವುದು.

19. ಅಸೋಷಿಯೇಷನ್‌ನ ಬೈಲಾದಲ್ಲಿರುವಂತೆ ಸಾಮಾನ್ಯ ಸಭೆಯ ಮತ್ತು ವಿಶೇಷ ಸರ್ವಸದಸ್ಯರ ಸಭೆಯನ್ನು ಕರೆಯುವುದು. ಕನಿಷ್ಠ ಪ್ರತಿ ೦೩ ತಿಂಗಳಿಗೊಮ್ಮೆ ಆಡಳಿತ ಮಂಡಳಿಯ ಸಭೆ ನಡೆಸತಕ್ಕದ್ದು.

20. ಮುಂದಿನ ವರ್ಷ ಆಯ–ವ್ಯಯ ಅಂದಾಜು ಪಟ್ಟಿಯ ವ್ಯವಸ್ಥೆ ಆಡಳಿತ ಮಂಡಳಿ ಸೂಚನೆಯನ್ನು ತಯಾರಿಸುವುದು.

21. ಅಸೋಷಿಯೇಷನ್‌ನ ಯಾವುದೇ ಸದಸ್ಯರು ಯಾವುದೇ ಕ್ರಿಮಿನಲ್ ಹಿನ್ನೆಲೆಯನ್ನು ಹೊಂದಿದ್ದರೆ ಚುನಾಯಿತ ಆಡಳಿತ ಮಂಡಳಿ ಅಂತಹ ವ್ಯಕ್ತಿಯನ್ನು ವಿಶೇಷ ಸರ್ವ ಸದಸ್ಯರ ಸಭೆಯಲ್ಲಿ ೨/೩ ಸದಸ್ಯರ ಮತಗಳ ಮೂಲಕ ಹೊರಹಾಕಬಹುದು.

22. ಅಸೋಷಿಯೇಷನ್‌ನ ಉದ್ದೇಶಗಳ ವ್ಯಾಪ್ತಿಯಲ್ಲಿ ಮನವಿ ಮಾಡಲು ಹಣ ಸಂಗ್ರಹಿಸಲು ಮತ್ತು ದೇಣಿಯನ್ನು ಸ್ವೀಕರಿಸಲು ಆಡಳಿತ ಮಂಡಳಿಗೆ ಅಧಿಕಾರವಿರುತ್ತದೆ.

23. ಅಸೋಷಿಯೇಷನ್‌ಗೆ ಸಲ್ಲಿಸಿದ ಯಾವುದೇ ಸೇವುದೇ ಸೇವೆಗಳಿಗೆ ಪ್ರತಿಯಾಗಿ ಸಮಂಜಸವಾದ ಸಂಭಾವನೆಯನ್ನು ಪಾವತಿಸಲು ಆಡಳಿತ ಮಂಡಳಿಗೆ ಅಧಿಕಾರವಿರುತ್ತದೆ.

24. ಅಸೋಷಿಯೇಷನ್‌ನ ಚುನಾಯಿತ ಆಡಳಿತ ಮಂಡಳಿಯ ಯಾವುದೇ ಸದಸ್ಯರ ರಾಜೀನಾಮೆಯಿಂದ ಉಂಟಾಗುವ ಖಾಲಿ ಹುದ್ದೆಯನ್ನು ಅಧ್ಯಕ್ಷರು ಮತ್ತು ಮಂಡಳಿಯ ಸದಸ್ಯರು ಭರ್ತಿ ಮಾಡುವುದು

25. ಸಾಮಾನ್ಯ ಸಭೆಯ ಒಪ್ಪಿಗೆಗೆ ಒಳಪಟ್ಟು ಈ ಕೆಳಗಿನಂತೆ ನಿಯಮಗಳನ್ನು ರೂಪಿಸಲು, ಬದಲಾಯಿಸಲು ನಿರ್ಣಯಿಸುವುದು.

    - ಸಿಬ್ಬಂದಿ ಸೇವಾ ನಿಯಮಗಳು
    - ಆಡಳಿತ ಹಾಗೂ ವ್ಯವಹಾರ ನಿಯಮಗಳು
    - ಅವಶ್ಯವಿರುವ ಇತರೆ ನಿಯಮಗಳು

**೪. ಪದಾಧಿಕಾರಿಗಳ ಅಧಿಕಾರ ಮತ್ತು ಕರ್ತವ್ಯಗಳು :–**

ಚುನಾಯಿತರಾದ ಒಟ್ಟು ೧೭ ಜನ ಸದಸ್ಯರನ್ನೊಳಗೊಂಡ ಆಡಳಿತ ಮಂಡಳಿಯು ಅಧ್ಯಕ್ಷರು, ಉಪಾಧ್ಯಕ್ಷರು, ಕಾರ್ಯದರ್ಶಿ, ಖಜಾಂಚಿ, ಜಂಟಿ ಕಾರ್ಯದರ್ಶಿ, ಸಲಹೆಗಾರರು ಮತ್ತು ಇನ್ನುಳಿದಂತೆ ನಿರ್ದೇಶಕರು ಇರತಕ್ಕದ್ದು.

**ಅಧ್ಯಕ್ಷರು :–**

1. ಅಸೋಷಿಯೇಷನ್‌ನ ಸಂಬಂಧಪಟ್ಟ ಎಲ್ಲಾ ಸಭೆಗಳನ್ನು ನಡೆಸುವುದು.

2. ಅಸೋಷಿಯೇಷನ್‌ನ ಸೂಕ್ತ ಮಾರ್ಗದರ್ಶನ ಮತ್ತು ಮೇಲ್ವಿಚಾರಣೆ.
3. ವಿಶೇಷ ಸಂದರ್ಭಗಳಲ್ಲಿ ನಿರ್ಣಾಯಕ ಮತವನ್ನು ಚಲಾಯಿಸುವ ಅಧಿಕಾರ ಹೊಂದಿರುತ್ತಾರೆ.
4. ಅಸೋಷಿಯೇಷನ್‌ನ ಸರ್ವತೋಮುಖ ಅಭಿವೃದ್ಧಿಗಾಗಿ ಶ್ರಮಿಸುವುದು.

**ಉಪಾಧ್ಯಕ್ಷರು :–**

ಅಧ್ಯಕ್ಷರೊಂದಿಗೆ ಅಸೋಷಿಯೇಷನ್‌ನ ಕೆಲಸ ಕಾರ್ಯಗಳಲ್ಲಿ ಸಹಕರಿಸುವುದು ಮತ್ತು ಅಧ್ಯಕ್ಷರ ಗೈರು ಹಾಜರಿಯಲ್ಲಿ ಆ ದಿನದ ಕರ್ತವ್ಯ ನಿರ್ವಹಿಸುವುದು. ಸಂಘದ ಸರ್ವತೋಮುಖ ಅಭಿವೃದ್ಧಿಗಾಗಿ ಶ್ರಮಿಸುವುದು.

**ಕಾರ್ಯದರ್ಶಿ :–**

1. ಅಧ್ಯಕ್ಷರ ಸೂಚನೆ ಮೇರೆಗೆ ಆಡಳಿತ ಮಂಡಳಿ ಹಾಗೂ ಇನ್ನಿತರೆ ಸಭೆಗಳನ್ನು ಕರೆಯುವುದು. ಸಾಮಾನ್ಯ/ಸರ್ವಸದಸ್ಯರ ಸಭೆಯನ್ನು ನಡೆಸುವ ಬಗ್ಗೆ ತಿಳುವಳಿಕೆ ಪತ್ರಗಳನ್ನು ನಿಗದಿತ ದಿವಸಗಳಿಗೆ ಮುಂಚಿತವಾಗಿ ಅಸೋಷಿಯೇಷನ್‌ನ ಸದಸ್ಯರಿಗೆ ನೋಂದಾಯಿತ ಅಂಚೆ ಅಥವಾ ಮುದ್ದಾಂ ಮೂಲಕ ಕಳುಹಿಸತಕ್ಕದ್ದು.
2. ಕರ್ನಾಟಕ ಸಂಘಗಳ ನೋಂದಣಿ ಅಧಿನಿಯಮ ೧೯೬೦ ಪ್ರಕರಣ ೧೩ ರ ಪ್ರಕಾರ ಪ್ರತಿ ವರ್ಷ ತಪ್ಪದೇ ಅಸೋಷಿಯೇಷನ್‌ನ ಲೆಕ್ಕಪರಿಶೋಧನಾ ವರದಿ, ಸರ್ವ ಸದಸ್ಯರ ಸಭೆಯ ನಡವಳಿಗಳು ಇನ್ನಿತರೆ ಅಗತ್ಯ ದಾಖಲಾತಿಗಳನ್ನು ಕರ್ನಾಟಕ ಸಂಘಗಳ ನೋಂದಣಿ ಅಧಿನಿಯಮದ ಪ್ರಕಾರ ಕಾಲಕಾಲಕ್ಕೆ ನಿರ್ವಹಿಸಬೇಕಾದ ಸಂಸ್ಥೆಯ ಜವಾಬ್ದಾರಿಗಳನ್ನು ನಿರ್ವಹಿಸುವುದು.
3. ಅಸೋಷಿಯೇಷನ್‌ನ ಆಡಳಿತ ಮಂಡಳಿ ಸಭೆಯಲ್ಲಿ ಚರ್ಚಿಸಿ ತೀರ್ಮಾನಿಸಿದ ಅಂಶಗಳನ್ನು ನಡವಳಿ ಪುಸ್ತಕದಲ್ಲಿ ನಮೂದಿಸತಕ್ಕದ್ದು.
4. ಅಸೋಷಿಯೇಷನ್‌ನ ಕಾರ್ಯಕಾರಿ ಸಮಿತಿ ತೀರ್ಮಾನಾನುಸಾರ ಸಂಘದ ದಿನಚರಿಯಲ್ಲಿ ಬರುವ ಖರ್ಚುಗಳನ್ನು ಮಿತಿಗೊಳಪಟ್ಟು ಮಂಜೂರು ಮಾಡುವುದು.
5. ಅಸೋಷಿಯೇಷನ್‌ನ ಕಾರ್ಯಕಾರಿ ಸಮಿತಿ ತೀರ್ಮಾನಾನುಸಾರ ಅಸೋಷಿಯೇಷನ್‌ನ ಕೆಲಸ ಕಾರ್ಯಗಳ ನಿರ್ವಹಣೆಗಾಗಿ ಅವಶ್ಯಕವಿರುವ ಸಿಬ್ಬಂದಿಗಳನ್ನು ನಿಯಮಾನುಸಾರ ನೇಮಕಾತಿ ಮಾಡಿಕೊಳ್ಳುವ ಹಾಗೂ ಅವರಿಗೆ ವೇತನ ನಿಗದಿ ಮಾಡುವುದು ಮತ್ತು ಸಿಬ್ಬಂದಿಗಳು ಕರ್ತವ್ಯ ಲೋಪವೆಸಗಿದ್ದಲ್ಲಿ ಕಾನೂನು ರೀತ್ಯ ಕ್ರಮ ಜರುಗಿಸುವ ಅಧಿಕಾರ ಹೊಂದಿರುತ್ತಾರೆ.
6. ಸಾಮ್ಯಾನ್ಯ ಆಡಳಿಕ್ಕೆ ಸಂಬಂಧಿಸಿದಂತೆ ರಿಜಿಸ್ಟರ್‌ಗಳನ್ನು ನಿರ್ವಹಿಸುವುದು, ಅಸೋಷಿಯೇಷನ್ ನೇಮಿಸಿದ ಸಿಬ್ಬಂಧಿ/ಕಾರ್ಮಿಕರುಗಳ ಉದ್ಯೋಗ/ಕೆಲಸಗಳನ್ನು ಮೇಲ್ವಿಚಾರಣೆ ಮಾಡುವುದು, ಅಧ್ಯಕ್ಷರು ಮತ್ತು ಖಜಾಂಚಿಗಳೊಂದಿಗೆ ಸಮಾಲೋಚಿಸಿ ದೋಷಗಳು/ ವೈಫಲ್ಯಗಳನ್ನು ಸಮಯೋಚಿತವಾಗಿ ಪತ್ತೆಹಚ್ಚುವ ಮೂಲಕ ಎಲ್ಲಾ ಸಾಮಾನ್ಯ ಸೌಲಭ್ಯಗಳ ನಿರ್ವಹಣೆಯನ್ನು ನಿರ್ವಹಿಸುವುದು.
7. ಸದಸ್ಯರ ರಿಜಿಸ್ಟರ್ ಅನ್ನು ಅಸೋಷಿಯೇಷನ್‌ನ ಕಾರ್ಯದರ್ಶಿ ನಿರ್ವಹಿಸುತ್ತಾರೆ. ಮಾಲೀಕರ ವಿವರಗಳು, ಅವರ ಹತ್ತಿರದ ಸಂಬಂಧಿಕರ ವಿವರಗಳು, ಸದಸ್ಯರ ಪಾಸ್‌ಪೋರ್ಟ್ ಗಾತ್ರದ ಫೋಟೋ, ವಿಳಾಸ,

ಇತ್ಯದಿಗಳನ್ನು ನೋಂದಣಿ ರಿಜಿಸ್ಟರ್‌ನಲ್ಲಿ ದಾಖಲಿಸುವುದು. ಈ ದಾಖಲೆಯ ವಿವರಗಳು ನಿವೇಷನ ಮಾಲೀಕರ ಪರಿಶೀಲನೆಗೆ ಲಭ್ಯವಿರುತ್ತದೆ.

8. ಅಸೋಷಿಯೇಷನ್‌ನ ಸರ್ವತೋಮುಖ ಅಭಿವೃದ್ಧಿಗಾಗಿ ಶ್ರಮಿಸುವುದು.

**ಖಜಾಂಚಿ :–**

1. ಅಸೋಷಿಯೇಷನ್‌ನ ಸದಸ್ಯರ ವಹಿ, ನಗದು ಪುಸ್ತಕ ಹಾಗೂ ಇತರೆ ವಹಿಗಳು ಮತ್ತು ದಾಖಲಾತಿಗಳನ್ನು ತಮ್ಮ ವಶದಲ್ಲಿಟ್ಟುಕೊಂಡು ನಿರ್ವಹಣೆ ಮಾಡುವುದು.
2. ಕಾರ್ಯಕಾರಿ ಸಮಿತಿ ಸಭೆಯಲ್ಲಿ ತಪ್ಪದೆ ಈ ಹಿಂದಿನ ಮಾಹೆಗಳ ಜಮಾ–ಖರ್ಚನ್ನು ಸಭೆಯಲ್ಲಿಟ್ಟು ಕಡ್ಡಾಯವಾಗಿ ಅನುಮೋದನೆ ಪಡೆಯಬೇಕು.
3. ಆರ್ಥಿಕ ವರ್ಷ ಮುಗಿದ ೧೦೦ ದಿನಗಳೊಳಗಾಗಿ ಲೆಕ್ಕ ಪರಿಶೋಧನಾ ವರದಿಯನ್ನು ತಯಾರಿಸಿ, ಅದನ್ನು ಸರ್ವಸದಸ್ಯರ ಸಭೆಯಲ್ಲಿ ಮಂಡಿಸಿ ಅನುಮೋದನೆ ಪಡೆಯತಕ್ಕದ್ದು.
4. ಮಾಸಿಕ ನಿರ್ವಹಣಾ ಶುಲ್ಕದ ಬಿಲ್‌ಗಳನ್ನು ತಯಾರಿಸಿ ಮತ್ತು ಸಕಾಲಿಕ ಸಂಗ್ರಹನೆಯನ್ನು ಖಚಿತಪಡಿಸಿಕೊಂಡು ಮತ್ತು ಸಂಗ್ರಹಣೆಯಾದ ಮೊತ್ತವನ್ನು ಬ್ಯಾಂಕ್‌ಗೆ ಸಕಾಲದಲ್ಲಿ ಜಮಾ ಮಾಡುವುದು.
5. ಬಾಕಿ ಪಾವತಿದಾರರಿಗೆ ಸಕಾಲದಲ್ಲಿ ಜ್ಞಾಪನ ಪತ್ರವನ್ನು ನೀಡುವುದು ಮತ್ತು ಪ್ರಗತಿಯ ಕುರಿತು ಕಾಲಕಾಲಕ್ಕೆ ಅಧ್ಯಕ್ಷರಿಗೆ ವರದಿ ಸಲ್ಲಿಸುವುದು.
6. ಅಸೋಷಿಯೇಷನ್‌ನ ವಿಶೇಷ ಸರ್ವ ಸದಸ್ಯರ ಸಭೆಯಲ್ಲಿ ಆಯವ್ಯಯ ಪಟ್ಟಿ, ಆಸ್ತಿ ಮೌಲ್ಯಮಾಪನ ಪಟ್ಟಿ, ಮುಂದಿನ ವರ್ಷದ ಬಜೆಟ್ ಸಿದ್ಧತೆ ಮತ್ತು ಪ್ರಸ್ತಾವನೆಯನ್ನು ತಯಾರಿಸಿ ಮಂಡಿಸುವುದು.
7. ಬಡಾವಣೆಗೆ ಸಂಬಂಧಪಟ್ಟ ನಿರ್ವಹಣಾ ಕಾರ್ಯಗಳು ವಾರ್ಷಿಕ ನಿರ್ವಹಣಾ ಒಪ್ಪಂದಗಳು ಮತ್ತು ಬದರ ಪಾವತಿಗಳನ್ನು ನೀಯಂತ್ರಿಸುವುದು.
8. ಸಾಮಾನ್ಯ ಪ್ರದೇಶಗಳು ಮತ್ತು ಸೌಲಭಗಳ ಆಡಳಿತದ ಮೇಲ್ವಿಚಾರಣೆಯನ್ನು ಮಾಡುವುದು.
9. ಅಸೋಷಿಯೇಷನ್‌ನ ಸರ್ವತೋಮುಖ ಅಭಿವೃದ್ಧಿಗಾಗಿ ಶ್ರಮಿಸುವುದು.

**೫. ಚುನಾವಣೆ :–**

1. ಆಡಳಿತ ಮಂಡಳಿಯ ಪದಾಧಿಕಾರಿಗಳನ್ನು ಚುನಾವಣೆಯ ಮೂಲಕ ಚುನಾಯಿಸುವುದು.
2. ಚುನಾವಣಾಧಿಕಾರಿಯಾಗಿ ಹಿರಿಯ ಸದಸ್ಯರನ್ನೊಬ್ಬರನ್ನು ಅಥವಾ ಹೊರಹೋಗುತ್ತಿರುವ ಆಡಳಿತ ಮಂಡಳಿಯಲ್ಲಿ ತೀರ್ಮಾನಿಸಿದ ಅಥವಾ ಕಾನೂನಿನ ಬಗ್ಗೆ ತಿಳುವಳಿಕೆ ಇರುವ ವ್ಯಕ್ತಿಯನ್ನು ಚುನಾವಣಾಧಿಕಾರಿಯನ್ನಾಗಿ ನೇಮಿಸಿಕೊಳ್ಳಬಹುದು.

3. ಚುನಾವಣೆಯ ೦೩ ತಿಂಗಳ ಮೊದಲು ಸುಸ್ತಿ ಸದಸ್ಯರ ಪಟ್ಟಿಯನ್ನು ಸಂಘದ ಕಾರ್ಯದರ್ಶಿಯವರು ಪ್ರಕಟಿಸಬೇಕು ಮತ್ತು ಸದರಿ ದಿನಾಂಕದಿಂದ ಒಂದು ತಿಂಗಳೊಳಗಾಗಿ ಸದರಿ ಸದಸ್ಯರಿಗೆ ಸುಸ್ತಿ ಹಣ ಪಾವತಿಸಲು ಅವಕಾಶಕೊಟ್ಟು, ಅವಧಿ ಮುಗಿದ ಒಂದು ವಾರದೊಳಗೆ ಅರ್ಹ ಮತದಾರರ ಪಟ್ಟಿಯನ್ನು ಪ್ರಕಟಿಸಬೇಕು ಮತ್ತು ಈ ಬಗ್ಗೆ ಅಸೋಷಿಯೇಷನ್‌ನ ಎಲ್ಲಾ ಸದಸ್ಯರಿಗೆ ತಿಳುವಳಿಕೆ ನೀಡಬೇಕು.
4. ಚುನಾವಣಾ ದಿನಾಂಕಕ್ಕಿಂತ ಮೂರು ತಿಂಗಳ ಮೊದಲು ಯಾವುದೇ ವ್ಯಕ್ತಿಯನ್ನು ಅಸೋಷಿಯೇಷನ್‌ನ ಸದಸ್ಯರನ್ನಾಗಿ ಮಾಡಿಕೊಳ್ಳತಕ್ಕದ್ದಲ್ಲ.
5. ಯಾವುದೇ ಸದಸ್ಯರು ಅಸೋಷಿಯೇಷನ್‌ನ ಆಡಳಿತ ಮಂಡಳಿಯ ಚುನಾವಣೆಯಲ್ಲಿ ಸ್ಪರ್ಧಿಸಬೇಕಾದಲ್ಲಿ ಅಸೋಷಿಯೇಷನ್‌ನ ಸದಸ್ಯರಾಗಿ ಕನಿಷ್ಠ ಎರಡು ವರ್ಷಗಳ ಕಾಲಾವಧಿ ಆಗಿರಬೇಕು.ಆಡಳಿತ ಮಂಡಳಿ ಚುನಾವಣೆಯ ದಿನಾಂಕದಿಂದ ೧೫ ದಿವಸದೊಳಗೆ ಪದಾಧಿಕಾರಿಗಳ ಆಯ್ಕೆಯನ್ನು ಕೈ ಎತ್ತುವುದರ ಮೂಲಕ ಅಥವಾ ಗುಪ್ತ ಮತದಾನದ ಮೂಲಕ ಆಯ್ಕೆ ಮಾಡಿಕೊಳ್ಳತಕ್ಕದ್ದು.
6. ಪ್ರತಿಯೊಂದು ಸಮಸ್ಯೆಯನ್ನು ಹಾಜರಿರುವ ಸದಸ್ಯರು ಅಥವಾ ಅವರ ಅಧಿಕೃತ ಪ್ರತಿನಿಧಿಗಳಲ್ಲಿ ಮತದಾನ ಮಾಡುವ ಮೂಲಕ ನಿರ್ಧರಿಸುವುದು. ಅಸೋಷಿಯೇಷನ್‌ನ ಎಲ್ಲಾ ಸಭೆಗಳಲ್ಲಿ ಅವನ/ಅವಳ/ಅವರ ಒಡೆತನದ ಪ್ರತಿ ವಸತಿ ನಿವೇಷನಕ್ಕೆ ಮತದಾನ ಮಾಡಲು ಪ್ರತಿಯೊಬ್ಬ ಸದಸ್ಯರು ಒಂದು ಮತವನ್ನು ಹೋಮ್ದಿರುತ್ತಾರೆ. ಎ.ಬಿ.ಎಂ ಇನ್ಫೋಸಿಟಿ ಬಡಾವಣೆಯಲ್ಲಿ ಒಬ್ಬ ವ್ಯಕ್ತಿಯು ಒಂದಕ್ಕಿಂತ ಹೆಚ್ಚು ನಿವೇಶನಗಳನ್ನು ಹೊಂದಿರುವಲ್ಲಿ ಆತನಿಗೆ ಒಂದು ಮತವನ್ನು ಮಾತ್ರ ಅನುಮತಿಸಲಾಗುತ್ತದೆ. ಆಡಳಿತ ಮಂಡಳಿಯ ಪ್ರತಿಯೊಬ್ಬ ಸದಸ್ಯರು ಒಂದು ಮತವನ್ನು ಹೊಂದಿರುತ್ತಾರೆ ಮತ್ತು ಹೆಚ್ಚುವರಿಯಾಗಿ ಸಮಬಲದ ಸಂದರ್ಭದಲ್ಲಿ ಅಧ್ಯಕ್ಷರು ಮತ ಚಲಾಯಿಸುವ ಹಕ್ಕನ್ನು ಹೊಂದಿರುತ್ತಾರೆ.
7. ಪ್ರಾಕ್ಸಿ:-ವೈಯಕ್ತಿಕವಾಗಿ ಬಡಾವಣೆಯಲ್ಲಿ ವಾಸಿಸದೇ ಇರುವ ಅಥವಾ ಸಭೆಯಲ್ಲಿ ಹಾಜರಾಗಲು ಅಥವಾ ಆಡಳಿತ ಮಂಡಳಿಗೆ ಚುನಾವನೆಗೆ ನಿಲ್ಲಲು ಸಾಧ್ಯವಾಗದ ಪ್ರತಿಯೊಬ್ಬ ಸದಸ್ಯರು ಲಿಖಿತವಾಗಿ ಅಧಿಕಾರ ನೀಡುವ ಹಕ್ಕುಗಳನ್ನು ಹೊಂದಿರುತ್ತಾರೆ. ಅವರ ಕುಟುಂಬದ ಯಾವುದೇ ಸದಸ್ಯರು ಅಥವಾ ಯಾವುದೇ ನಿವಾಸಿ ಅಥವಾ ಮತ ಚಲಾಯಿಸದ ಮಾಲೀಕರ ಪರವಾಗಿ ಬಾಡಿಗೆದಾರ ಅಥವಾ ಪರವಾನಗಿದಾರ ಅಥವಾ ಭೋಗ್ಯದಾರನಿಗೆ ಸಂಘದ ಎಲ್ಲಾ ಸಭೆಗಳಲ್ಲಿ ಪ್ರತಿನಿಧಿಸಲು ಮತ್ತು ಮತಚಲಾಯಿಸಲು ಸದಸ್ಯರು ಖುದ್ದಾಗಿ ಅಥವಾ ಲಿಖಿತ ರೂಪದಲ್ಲಿ ಮನವಿಯನ್ನು ಅಧ್ಯಕ್ಷರು/ಕಾರ್ಯದರ್ಶಿಗೆ ಸಲ್ಲಿಸಿ ಅನುಮತಿ ಪಡೆದುಕೊಂಡು ಭಾಗವಹಿಸುವುದು ಮತ್ತು ಮತಚಲಾಯಿಸಬಹುದು.
8. ನಿವೇಶನ ಮಾಲೀಕರ ಅಧಿಕೃತ ಪ್ರತಿನಿಧಿಗಳಿಗೆ ಮತ್ತು ಬಾಡಿಗೆದಾರರಿಗೆ ವಾರ್ಷಿಕ ಸರ್ವ ಸದಸ್ಯರ ಸಭೆಯಲ್ಲಿ ಭಾಗವಹಿಸುವ ಅವಕಾಶವಿರುತ್ತದೆ. ಆದರೆ ಮತದಾನ ಮಾಡಲು ಅವಕಾಶವಿರುವುದಿಲ್ಲ.
9. ಅಸೋಷಿಯೇಷನ್‌ನ ನಿಗಧೀಪಡಿಸಿದ ಬಾಕಿ ಪಾವತಿಗಳನ್ನು ೯೦ ದಿನಗಳಿಗಿಂತ ಹೆಚ್ಚು ದಿನ ಬಾಕಿ ಉಳಿಸಿದರೆ ಅಂತಹ ಸದಸ್ಯರು ಮತದಾನದ ಹಕ್ಕಿನಿಂದ ವಂಚಿತರಾಗುತ್ತಾರೆ ಮತ್ತು ಅಂತಹ ಸದಸ್ಯರ ಮರುಪ್ರವೇಶವನ್ನು ಮೆರಿಟ್ ಆಧಾರದ ಮೇಲೆ ಆಡಳಿತ ಮಂಡಳಿಯು ನಿರ್ಧರಿಸುತ್ತದೆ.

೬. ಆಡಳಿತ ಮಂಡಳಿ ಸಭೆಗಳು :–

೧. ಆಡಳಿತ ಮಂಡಳಿ ಸಭೆಯಲ್ಲಿ ಚರ್ಚಿಸಿ ತೀರ್ಮಾನಿಸಿದ ಅಂಶಗಳನ್ನು ನಡವಳಿ ಪುಸ್ತಕದಲ್ಲಿ ನಮೂದಿಸತಕ್ಕದ್ದು.

೨. ಕಾರ್ಯಕಾರಿ ಸಮಿತಿ ಸಭೆಯಲ್ಲಿ ತಪ್ಪದೆ ಈ ಹಿಂದಿನ ಮಾಹೆಗಳ ಜಮಾ–ಖರ್ಚನ್ನು ಸಭೆಯಲ್ಲಿಟ್ಟು ಕಡ್ಡಾಯವಾಗಿ ಅನುಮೋದನೆ ಪಡೆಯಬೇಕು.

೩. ಕಾರ್ಯಕಾರಿ ಸಮಿತಿ ಸಭೆಯಲ್ಲಿ ಅರ್ಧಕ್ಕಿಂತ ಹೆಚ್ಚಿನ ಸದಸ್ಯರ ಕೋರಂ ಇರತಕ್ಕದ್ದು. ಅಗತ್ಯಕ್ಕಿಂತ ಆಡಳಿತ ಮಂಡಳಿ ಸದಸ್ಯರು ಹಾಜರಾಗದಿದ್ದಲ್ಲಿ ಮುಂದಿನ ದಿನಕ್ಕೆ ಸಭೆಯನ್ನು ಮುಂದೂಡತಕ್ಕದ್ದು. ಮುಂದೂಡಿದ ಸಭೆಗೆ ಸದ್ಯರ ಕೋರಂ ಅಗತ್ಯವಿರುವುದಿಲ್ಲ. ಕಾರ್ಯ ವಿವರಗಳನ್ನು ಪರ್ಯಲೋಚಿಸಿ ತೀರ್ಮಾನಗಳನ್ನು ಕೈಗೊಳ್ಳುವ ಅಧಿಕಾರವಿರುತ್ತದೆ.

೪. ಕಾರ್ಯಕಾರಿ ಸಮಿತಿ ಸಾಮಾನ್ಯ ಸಭೆಯನ್ನು ನಡೆಸುವ ಬಗ್ಗೆ ತಿಳುವಳಿಕೆ ಪತ್ರಗಳನ್ನು ಸ್ಪಷ್ಟ ೦೭ ದಿವಸಗಳಿಗೆ ಕಡಿಮೆ ಇಲ್ಲದಂತೆ ಮುಂಚಿತವಾಗಿ ಸದಸ್ಯರಿಗೆ ನೋಂದಾಯಿತ ಅಂಚೆ ಅಥವಾ ಮುದ್ದಾಂ ಮೂಲಕ ಕಳುಹಿಸತಕ್ಕದ್ದು.

೭. ಲೆಕ್ಕ ಪತ್ರಗಳ ನಿರ್ವಹಣೆ :–

1. ಅಸೋಷಿಯೇಷನ್‌ನ ಹೆಸರಿನಲ್ಲಿ ಯಾವುದಾದರೂ ಒಂದು ಷಡ್ಯೂಲ್ಡ್/ರಾಷ್ಟ್ರೀಕೃತ/ಸಹಕಾರ ಸಂಘ/ಬ್ಯಾಂಕಿನಲ್ಲಿ ಒಂದು ಚಾಲ್ತಿ ಖಾತೆಯನ್ನು ತೆರೆದು, ಆ ಖಾತೆಯಲ್ಲಿ ಅಸೋಷಿಯೇಷನ್‌ನ ಹಣವನ್ನು ಜಮಾಮಾಡಿ ಅಸೋಷಿಯೇಷನ್‌ನ ವಿವಿಧ ಕಾರ್ಯಕ್ರಮಗಳಿಗೆ ಹಣ ಬೇಕಾದಾಗ ಅಸೋಷಿಯೇಷನ್‌ನ **ಅಧ್ಯಕ್ಷರು/ಕಾರ್ಯದರ್ಶಿ ಮತ್ತು ಖಜಾಂಚಿ** ಇವರಲ್ಲಿ ಇಬ್ಬರ ಜಂಟಿ ಸಹಿಯೊಡನೆ ಹಣವನ್ನು ಪಡೆಯಬಹುದು.
2. ಆರ್ಥಿಕ ವರ್ಷ ಮುಗಿದ ೧೦೦ ದಿನಗಳೊಳಗಾಗಿ ಲೆಕ್ಕ ಪರಿಶೋಧನಾ ವರದಿಯನ್ನು ತಯಾರಿಸಿ, ಅದನ್ನು ಸರ್ವಸದಸ್ಯರ ಸಭೆಯಲ್ಲಿ ಮಂಡಿಸಿ ಅನುಮೋದನೆ ಪಡೆಯತಕ್ಕದ್ದು.

೮. ಸರ್ವ ಸದಸ್ಯರ ಸಭೆ :–

1. ಕರ್ನಾಟಕ ಸಂಘಗಳ ನೋಂದಣಿ ಅಧಿನಿಯಮ ೧೯೬೦ ರ ಪ್ರಕಾರ ಪ್ರತಿ ವರ್ಷ ಸರ್ವ ಸದಸ್ಯರ ಸಭೆಯನ್ನು ನಡೆಸಬೇಕು. ಸದರಿ ಸಭೆಗೆ ಸ್ಪಷ್ಟ ೨೧ ದಿವಸಗಳ ಮುಂಚಿತವಾಗಿ ಅಸೋಷಿಯೇಷನ್‌ನ ಎಲ್ಲಾ ಸದಸ್ಯರಿಗೆ ಸಭೆಯ ವಿಷಯದ ಬಗ್ಗೆ ನೋಟಿಸನ್ನು ಅಂಚೆ ದೃಢೀಕರಣ/ಇ–ಮೇಲ್/ಮುದ್ದಾಂ ಮೂಲಕ ಜಾರಿಗೊಳಿಸುವುದು.
2. ಸರ್ವ ಸದಸ್ಯರ ಸಭೆಯಲ್ಲಿರುವ ವಿಷಯ ಸೂಚನೆಗಳ ಬಗ್ಗೆ ಪ್ರಶ್ನೆ ಮಾಡುವ ಸದಸ್ಯರುಗಳು ತಾವು ಕೇಳುವ ಪ್ರಶ್ನೆಗಳ ವಿವರ ಇತ್ಯಾಧಿಗಳನ್ನು ಸದರಿ ಸಭೆಯ ೧೦ ದಿವಸಗಳ ಮೊದಲು ಅಸೋಷಿಯೇಷನ್‌ನ ಕಾರ್ಯದರ್ಶಿಗೆ ನೀಡಿ ಸ್ವೀಕೃತಿ ಪಡೆಯಬೇಕು.
3. ಸರ್ವ ಸದಸ್ಯರ ಸಭೆಯಲ್ಲಿ ೧/೩ ಭಾಗದಷ್ಟು ಸದಸ್ಯರಿಗೆ ಕಡಿಮೆ ಇಲ್ಲದೆ ಹಾಜರಿರಬೇಕು. ಸಭೆಯಲ್ಲಿ ಕಾರ್ಯ ಕಲಾಪಗಳು ಪ್ರಾರಂಭವಾಗಲು ಗೊತ್ತುಪಡಿಸಿದ ಸಮಯದಿಂದ ಒಂದು ಗಂಟೆಯ ಒಳಗಾಗಿ ಸಭೆಗೆ ಅವಶ್ಯಕ ಸಂಖ್ಯೆ

ಇಲ್ಲದಿದ್ದರೆ ಆ ಸಭೆಯನ್ನು ರದ್ದುಪಡಿಸಿ, ಮುಂದಿನ ೩೦ ದಿನಗಳೊಳಗೆ ಮುಂದೂಡತಕ್ಕದ್ದು ಹಾಗೂ ಮುಂದೂಡಿದ ದಿನಾಂಕ ಮತ್ತು ವೇಳೆ ಇತ್ಯಾದಿಗಳನ್ನು ಅಧ್ಯಕ್ಷರು ನಿಶ್ಚಯಿಸಿ ತಕ್ಷಣವೇ ಸಭೆಯಲ್ಲಿ ತಿಳಿಸತಕ್ಕದ್ದು. ಇಂತಹ ಮುಂದೂಡಿದ ಸಭೆಗೆ ಕೋರಂನ ಅವಶ್ಯಕತೆ ಇರುವುದಿಲ್ಲ ಮತ್ತು ಅಲ್ಲಿ ಹೊಸ ವಿಷಯಗಳನ್ನು ಚರ್ಚಿಸುವಂತಿಲ್ಲ.

4. ಸರ್ವ ಸದಸ್ಯರ ಸಭೆಯಲ್ಲಿ ಅಸೋಷಿಯೇಷನ್‌ನ ಈ ಹಿಂದಿನ ವರ್ಷದ ಸಾಧನೆ, ಲೆಕ್ಕಪತ್ರಗಳ ಅನುಮೋದನೆ ಮತ್ತು ಮುಂದಿನ ವರ್ಷದ ಆಯವ್ಯಯ ಯೋಜನೆಗಳ ಬಗ್ಗೆ ಚರ್ಚಿಸುವುದು. ಮುಂದಿನ ವರ್ಷದ ಆಯವ್ಯಯ, ಅಂದಾಜು ಪಟ್ಟಿಯನ್ನು ಅನುಮೋದನೆ ಪಡೆಯುವುದು
5. ಅಸೋಷಿಯೇಷನ್ ಸಭೆಗಳನ್ನು ಮಾಲೀಕರಿಗೆ ಅನುಕೂಲಕರವಾದ ಸ್ಥಳದಲ್ಲಿ ಅಸೋಷಿಯೇಷನ್‌ನಿಂದ ಗೊತ್ತುಪಡಿಸುವುದು.
6. ವಾರ್ಷಿಕ ಸಭೆಗಳು: ಅಸೋಷಿಯೇಷನ್‌ನ ಮೊದಲ ವಾರ್ಷಿಕ ಸಭೆಯು ಅಸೋಷಿಯೇಷನ್‌ನ ನೋಂದಣಿಯ ದಿನಾಂಕದಿಂದ ಆರು ತಿಂಗಳ ಒಳಗೆ ನಡೆಸಲಾಗುತ್ತದೆ.
7. ಅಧ್ಯಕ್ಷರು ಅಥವಾ ಅವರ ಅನುಪಸ್ಥಿತಿಯಲ್ಲಿ ಕಾರ್ಯದರ್ಶಿ ಸಾಮಾನ್ಯ ಸಭೆಗಳಲ್ಲಿ ಅಧ್ಯಕ್ಷತೆ ವಹಿಸುತ್ತಾರೆ. ಇಬ್ಬರ ಅನುಪಸ್ಥಿತಿಯಲ್ಲಿ ಸಭೆಯಲ್ಲಿ ಹಾಜರಿದ್ದ ಸದಸ್ಯರು ಅಧ್ಯಕ್ಷತೆ ವಹಿಸಲು ತಮ್ಮಲ್ಲಿ ಒಬ್ಬರನ್ನು ಆಯ್ಕೆ ಮಾಡಬಹುದು.

**೯. ವಿಶೇಷ ಸರ್ವ ಸದಸ್ಯರ ಸಭೆ :-**

1. ಕರ್ನಾಟಕ ಸಂಘಗಳ ನೋಂದಣಿ ಅಧಿನಿಯಮ ೧೯೬೦ ಪ್ರಕರಣ ೯, ೧೦, ೨೧, ೨೨ ಮತ್ತು ೨೩ ರ ಪ್ರಕಾರ ಅಸೋಷಿಯೇಷನ್‌ನ ಧ್ಯೇಯೋದ್ದೇಶಗಳನ್ನು, ನಿಯಮ ಮತ್ತು ನಿಬಂಧನೆಗಳನ್ನು ವಿಶೇಷ ಸರ್ವ ಸದಸ್ಯರ ಸಭೆಯಲ್ಲಿ ಅನುಮತಿ ಪಡೆದು ತಿದ್ದುಪಡಿ ಮಾಡತಕ್ಕದ್ದು.
2. ವಿಶೇಷ ಸರ್ವ ಸದಸ್ಯರ ಸಭೆಯನ್ನು ಸ್ಪಷ್ಟ ೨೧ ದಿವಸಗಳ ಮುಂಚಿತವಾಗಿ ಅಸೋಷಿಯೇಷನ್‌ನ ಎಲ್ಲಾ ಸದಸ್ಯರಿಗೆ ಸಭೆಯ ವಿಷಯದ ಬಗ್ಗೆ ನೋಟೀಸನ್ನು ಅಂಚೆ ದೃಢೀಕರಣ ಪತ್ರದ ಮೂಲಕ ಜಾರಿಗೊಳಿಸುವುದು.
3. ನಿಬಂಧನೆಗಳಾಗಲೀ ಅಥವಾ ಉಪ ನಿಬಂಧನೆಗಳಾಗಲಿ ಇವುಗಳಿಗೆ ವಿರೋಧವಿಲ್ಲದಂತೆ ರಚಿಸಿಕೊಳ್ಳುವ ಅಥವಾ ಬದಲಾಯಿಸುವ ಅಧಿಕಾರವಿರುತ್ತದೆ. ಸದರಿ ಸಭೆಯಲ್ಲಿ ೧/೩ ಭಾಗದಷ್ಟು ಸದಸ್ಯರು ಒಪ್ಪಿಗೆ ಕೊಟ್ಟಾಗ ಮಾತ್ರ ಅಂತಹವುಗಳನ್ನು ತಿದ್ದುಪಡಿ ಮಾಡಬಹುದು.
4. ಕಾರ್ಯಕಾರಿ ಸಮಿತಿಯ ನಿರ್ಣಯದ ನಿರ್ದೇಶನದಂತೆ ಅಥವಾ ಬಹುಪಾಲು ಮಾಲೀಕರು ಸಹಿ ಮಾಡಿದ ಮನವಿಯ ಮೇರೆಗೆ ನಿವೇಶನ ಮಾಲೀಕರ ವಿಶೇಷ ಸಭೆಯನ್ನು ಕರೆಯುವುದು ಅಧ್ಯಕ್ಷರ ಕರ್ತವ್ಯವಾಗಿರುತ್ತದೆ. ಯಾವುದೇ ವಿಶೇಷ ಸಭೆಯ ಸೂಚನೆಯು ಅಂತಹ ಸಭೆಯ ಸ್ಥಳ ಮತ್ತು ಅದರ ಉದ್ದೇಶವನ್ನು ತಿಳಿಸುತ್ತದೆ. ವೈಯಕ್ತಿಕವಾಗಿ ಹಾಜರಿರುವ ಬಹುಪಾಲು ಮಾಲೀಕರ ಒಪ್ಪಿಗೆಯಿಲ್ಲದೇ ನೋಟಿಸ್‌ನಲ್ಲಿ ತಿಳಿಸಿದ ಹೊರತು ಬೇರೆ ಯಾವುದೇ ಚರ್ಚೆಯನ್ನು ವಿಶೇಷ ಸಭೆಯಲ್ಲಿ ನಡೆಸಲಾಗುವುದಿಲ್ಲ.

5. ಕರ್ನಾಟಕ ಸಂಘಗಳ ನೋಂದಣಿ ಅಧಿನಿಯಮ ೧೯೬೦ ರ ಪ್ರಕಾರ ವಿಶೇಷ ಸರ್ವ ಸದಸ್ಯರ ಸಭೆಯ ದಿನಾಂಕದಿಂದ ೩೦ ದಿವಸಗಳೊಳಗೆ ಸಂಘಗಳ ಜಿಲ್ಲ್ಲಾ ನೋಂದಣಾಧಿಕಾರಿಗಳಿಗೆ ಸಲ್ಲಿಸಿ ಅನುಮೋದನೆ ದೊರೆತ ದಿನಾಂಕದಿಂದ ಉದ್ದೇಶಿತ ತಿದ್ದುಪಡಿಯು ಜಾರಿಗೆ ಬರುತ್ತದೆ.

**೧೦. ಸಂಘದ ಕಾರ್ಯಾವಧಿ :-**

- ಬೆಳಗ್ಗೆ ೧೦.೦೦ ರಿಂದ ಸಂಜೆ ೬.೦೦ ಗಂಟೆಯವರೆಗೆ. (ಆಡಳಿತ ಮಂಡಳಿಯ ತೀರ್ಮಾನದಂತೆ)

**೧೧. ಬಂಡವಾಳ ಹೂಡಿಕೆ :-**

- ಅಸೋಷಿಯೇಷನ್‌ನ ನಿಧಿಯನ್ನು ಆದಾಯ ತೆರಿಗೆ ವಿದಿ ೧೩(೧)ಡಿ ಡಿತ್ತಿ ೧೧(೫) ಆದಾಯ ತೆರಿಗೆ ೧೯೬೧ ರಂತೆ ಹೂಡಲಾಗುವುದು ಹಾಗೂ ಸದರಿ ಅಧಿನಿಯಮಕ್ಕೆ ಅನುಗುಣವಾಗಿ ಕಾಲಕಾಲಕ್ಕೆ ತಿದ್ದುಪಡಿ ಮಾಡಲಾಗುವುದು.

**೧೨. ತಿದ್ದುಪಡಿಗಳು :-**

- ಆದಾಯ ತೆರಿಗೆ ಅಧಿನಿಯಮ ೧೯೬೧ ರ ವಿಧಿ ೨(೧೫), ೧೧, ೧೨ ಮತ್ತು ೮೦ (ಜಿ) ಅವಕಾಶಗಳಿಗೆ ವಿರುದ್ಧವಾಗಿ ಯಾವುದೇ ತಿದ್ದುಪಡಿಗಳು ಸಂಸ್ಥೆಯ ಜ್ಞಾಪನಾ ಪತ್ರ ಹಾಗೂ ನಿಯಮ ಮತ್ತು ನಿಬಂಧನೆಗಳಿಗೆ ಮಾಡಬಾರದು. ಕಾಲಕಾಲಕ್ಕೆ ಆಗುವ ತಿದ್ದುಪಡಿಗಳನ್ನು ಪಾಲಿಸುವುದು. ಯಾವುದೇ ತಿದ್ದುಪಡಿಗಳನ್ನು ಆದಾಯ ತೆರಿಗೆ ಆಯುಕ್ತರ ಪೂರ್ವಾನುಮತಿ ಇಲ್ಲದೆ ಮಾಡಬಾರದು.

**೧೩. ಸಂಘದ ವಿಘಟನೆ, ವಿಸರ್ಜನೆ :-**

- ಅಸೋಷಿಯೇಷನ್‌ಯನ್ನು ಒಂದು ವೇಳೆ ಮುಚ್ಚುವುದು ಅಥವಾ ವಿಸರ್ಜನೆ ಮಾಡಬೇಕಾದರೆ, ಅಸೋಷಿಯೇಷನ್‌ನ ಆಸ್ತಿ, ಸ್ವತ್ತುಗಳನ್ನು ಯಾವುದೇ ಕಾರಣದಿಂದ ಆಡಳಿತ ಮಂಡಳಿ ಸದಸ್ಯರಿಗಾಗಲೀ ಅಥವಾ ಯಾವುದೇ ವ್ಯಕ್ತಿಗಾಗಲೀ ವಿತರಿಸತಕ್ಕದಲ್ಲ. ಆದರೆ, ಸಮಾನ ಉದ್ದೇಶವುಳ್ಳ ಯಾವುದೇ ಸಂಸ್ಥೆಯು ಆದಾಯ ತೆರಿಗೆ ಅಧಿನಿಯಮ ೧೯೬೧ ವಿಧಿ ೮೦(ಜಿ)ರ ಪ್ರಕಾರ ಹೊಂದಿದ್ದಲ್ಲಿ ಅಂತಹ ಅಸೋಷಿಯೇಷನ್/ಕಂಪನಿ/ಸಂಸ್ಥೆಗೆ ಹಸ್ತಾಂತರಿಸುವುದು. ಇವು ಕಾಲಕಾಲಕ್ಕೆ ಆಗುವ ಬದಲಾವಣೆಗಳಿಗೆ ಒಳಪಟ್ಟಿರುತ್ತವೆ.
- ಅಸೋಷಿಯೇಷನ್ ಕರ್ನಾಟಕ ಸಂಘಗಳ ನೋಂದಣಿ ಅಧಿನಿಯಮ ೧೯೬೦ ಪ್ರಕರಣ ೨೨ ಮತ್ತು ೨೩ ರ ಪ್ರಕಾರ ಕ್ರಮ ಕೈಗೊಂಡು ವಿಸರ್ಜಿಸಬಹುದು.

೧೪. ಸಂಘದ ಸಂಯೋಜನೆ :–

- ಕರ್ನಾಟಕ ಸಂಘಗಳ ನೋಂದಣಿ ಅಧಿನಿಯಮ ೧೯೬೦ ಪ್ರಕರಣ ೨೧ ರ ಪ್ರಕಾರ ಕ್ರಮ ಕೈಗೊಂಡು ಬೇರಾವುದೇ ನೋಂದಣಿಯಾಗಿರುವ ಸಂಸ್ಥೆಯಲ್ಲಿ ಕೂಡಿಕೊಳ್ಳಬಹುದು.

೧೫. ಫಲಾನುಭವಿಗಳು :–

- ಅಸೋಷಿಯೇಷನ್‌ನ ಸೌಲಭ್ಯಗಳು ನಿಯಮಾವಳಿಗೊಳಪಟ್ಟು ಎಬಿಎಂ ಇನ್ಫೋಸಿಟಿ ಬಡಾವಣೆಯಲ್ಲಿ ನಿವೇಶನ ಹೊಂದಿರುವ ಸದಸ್ಯರಿಗೆ, ಜಾತಿ, ಮತ, ವರ್ಣ ಬೇದವಿಲ್ಲದೆ ಎಲ್ಲರಿಗೂ ದೊರೆಯತಕ್ಕದ್ದು.

೧೬. ಹಣ ವಿನಿಯೋಗ ಬಳಸುವಿಕೆ :–

- ಕರ್ನಾಟಕ ಸಂಘಗಳ ನೋಂದಣಿ ಅಧಿನಿಯಮ ೧೯೬೦ ಪ್ರಕರಣ ೩ರ ಪ್ರಕಾರ ಅಸೋಷಿಯೇಷನ್‌ನ ಲ್ಲಿ ಉತ್ಪತ್ತಿಯಾಗುವ ಹಣವನ್ನು ಅಸೋಷಿಯೇಷನ್‌ನ ಅಭಿವೃದ್ಧಿಗೆ ಉಪಯೋಗಿಸುವುದು. ಯಾವುದೇ ಕಾರಣದಿಂದ ಯಾವುದೇ ರೂಪದಲ್ಲಿ ಆ ಹಣವನ್ನು ಸದಸ್ಯರಿಗೆ ಹಂಚಲಾಗುವುದಿಲ್ಲ.
- ಎಬಿಎಂ ಇನ್ಫೋಸಿಟಿಯ ಎಲ್ಲಾ ಸದಸ್ಯರು ಮತ್ತು ನಿವಾಸಿಗಳು ಉತ್ತಮ ಲಾಭ ಮತ್ತು ಸಾಮಾನ್ಯ ಹಿತದೃಷ್ಟಿಯಿಂದ ಕಾರ್ಪಸ್ ಫಂಡ್‌ನ ಏಕೈಕ ಸಂರಕ್ಷಕರಾಗಿ ಮತ್ತು ಅನುಮೋದಿತ ಕಾನೂನುಗಳು ಮತ್ತು ಕಾರ್ಯವಿಧನಗಳ ಪ್ರಕಾರ ಅಂತಹ ಹಣವನ್ನು ನಿರ್ವಹಿಸುವುದು.

೧೭. ವಿವಿಧ ವಿಷಯಗಳು:–

1. ಅಸೋಷಿಯೇಷನ್‌ನ ಸಾಮಾನ್ಯ ಮುದ್ರೆಯನ್ನು ಹೊಂದಿದ್ದು ಅದು ಕಾರ್ಯದರ್ಶಿಯ ವಶದಲ್ಲಿರುತ್ತದೆ ಮತ್ತು ಅದನ್ನು ಕಾರ್ಯಕಾರಿ ಸಮಿತಿಯ ಸಭಾ ನಡಾವಳಿ ಮತ್ತು ಸೂಚನಾ ಪತ್ರದ ಕೆಳಭಾಗದಲ್ಲಿ ಕಾರ್ಯದರ್ಶಿಯ ಸಹಿಯೊಂದಿಗೆ ಮಾತ್ರ ಬಳಸಲಾಗುತ್ತದೆ. ಅಸೋಷಿಯೇಷನ್ ಜೊತೆ ಮಾಡಿಕೊಂಡಿರುವ ಒಪ್ಪಂದ ಪತ್ರಗಳು ಅಥವಾ ಪರವಾನಗೆ ಪತ್ರಗಳಿಗೆ ಮೊಹರನ್ನು ಬಳಸುವುದು.
2. ಅಸೋಷಿಯೇಷನ್‌ನ ತನ್ನ ಸೂಚನಾ ಫಲಕವನ್ನು ಕಛೇರಿಯಲ್ಲಿ ಅಳವಳಿಸಲಾಗುವುದು. ಸೂಚನಫಲಕದಲ್ಲಿ ಲೆಕ್ಕಪತ್ರಗಳ ಹೇಳಿಕೆಗಳು, ಸುತ್ತೋಲೆಗಳು, ವಾರ್ಷಿಕ ವರದಿಗಳು ಮತ್ತು ಸದಸ್ಯರಿಗೆ ಸೂಚನೆಗಳನ್ನು ನೀಡಲಾಗುವುದು.
3. ಪ್ರತಿಯೊಬ್ಬ ಸದಸ್ಯರಿಗೆ ಅಸೋಷಿಯೇಷನ್‌ನ ಲೆಕ್ಕಪತ್ರಗಳು, ಸಭಾ ನಡಾವಳಿಗಳು, ಸದಸ್ಯರ ದಾಖಲೆಗಳು ಮತ್ತು ಅಸೋಷಿಯೇಷನ್‌ಗೆ ಸಂಬಂಧಪಟ್ಟ ಎಲ್ಲಾ ವ್ಯಾವಹಾರಗಳ ಮಾಹಿತಿಯನ್ನು ಪರಿಶೀಲಿಸುವ ಮತ್ತು ನಿಗಧಿತ ಶುಲ್ಕವನ್ನು ಪಾವತಿಸಿ ದಾಖಲೆಯ ಪ್ರತಿಯನ್ನು ಪಡೇಯುವ ಹಕ್ಕಿದೆ.
4. ರೂ.೧೦,೦೦೦/– ಮೀರಿದ ಎಲ್ಲಾ ಪಾವತಿಗಳನ್ನು ಚೆಕ್/ಆರ್.ಟಿ.ಜಿ.ಎಸ್/ನೆಫ್ಟ್ ಮೂಲಕವೇ ಪಾವತಿಸಬೇಕು.

5. ಖಜಾಂಚಿಯ ವಶದಲ್ಲಿ ರೂ.೨೦,೦೦೦/– ವರೆಗೆ ನಗದು ಹಣವನ್ನು ಇಡಬಹುದು.
6. ಎಬಿಎಂ ಇನ್ಫೋಸಿಟಿ ಓನರ್ಸ್ ವೆಲ್‌ಫೇರ್ ಆಸೋಷಿಯೇಷನ್ ರಾಮನಗರ ಜಿಲ್ಲಾ ನ್ಯಾಯಾಲಯದ ವ್ಯಾಪ್ತಿಗೆ ಒಳಪಟ್ಟಿರುತ್ತದೆ.
7. ಕರ್ನಾಟಕ ಸಂಘಗಳ ನೋಂದಣಿ ಕಾಯ್ದೆ ೧೯೬೦ರ ಅನುಸಾರ ನಿಯಮಗಳು ಮತ್ತು ನಿಬಂಧನೆಗಳು ಒಳಪಟ್ಟಿರುತ್ತದೆ. ಆಡಳಿತ ಮಂಡಳಿಯ ಸದಸ್ಯರ ಪಟ್ಟಿ ಮತ್ತು ವಿಳಾಸಗಳನ್ನು ಈ ಕೆಳಗೆ ನಮೂದಿಸಲಾಗಿದೆ.

| ಕ್ರ.ಸಂ | ಹೆಸರು | ಸಂಘದ ಹುದ್ದೆ | ಸಹಿ |
|---|---|---|---|
| 1. | ಕೆ.ಪ್ರಕಾಶ್ ರೈ<br>ಬಿನ್ ಸುವರ್ಣ ರೈ | ಅಧ್ಯಕ್ಷರು | |
| 2. | ಜಿತೇಂದ್ರ ಮಲ್ಲಿ<br>ಬಿನ್ ಕೆ. ಉಗ್ಗಪ್ಪ ಮಲ್ಲಿ | ಉಪಾಧ್ಯಕ್ಷರು | |
| 3. | ನಾಗೇಶ್ವರ್ ವಿಜಾಪುರ್<br>ಬಿನ್ ಮಲ್ಲೇಶಪ್ಪ ವಿಜಾಪುರ್. | ಕಾರ್ಯದರ್ಶಿ | |
| 4. | ಮನ್ಸೂರ್ ಕಲತ್ತಿನಾಲ್ ಪಕ್ಕರ್,<br>ಬಿನ್ ಪಕ್ಕರ್ ಕಲತ್ತಿನಾಲ್ ಅಹಮ್ಮದ್, | ಖಜಾಂಚಿ | |
| 5. | ಕಾರ್ತಿಕ್ ರಾಮಚಂದ್ರ<br>ಬಿನ್. ಹೆಚ್.ಎ.ರಾಮಚಂದ್ರ | ಜಂಟಿ ಕಾರ್ಯದರ್ಶಿ | |
| 6. | ಪುಷ್ಪರಾಜ್ ಶೆಟ್ಟಿ,<br>ಬಿನ್ ಎನ್. ಜಗನ್ನಾಥ ಶೆಟ್ಟಿ, | ಸಲಹೆಗಾರರು | |
| 7. | ಎಸ್.ಆರ್.ನವೀನ್<br>ಬಿನ್. ಎಸ್. ರಾಧಕೃಷ್ಣ | ನಿರ್ದೇಶಕರು | |
| 8. | ಸ್ಮಿತಾ ಪುಷ್ಪರಾಜ್ ಶೆಟ್ಟಿ<br>ಕೋಂ. ಪುಷ್ಪರಾಜ್ ಶೆಟ್ಟಿ | ನಿರ್ದೇಶಕರು | |
| 9. | ಶ್ರೀಕಾಂತ್.ಕೆ<br>ಲೇ. ಪಿ.ಕೆ.ಉಪಾಧ್ಯಾಯ | ನಿರ್ದೇಶಕರು | |

| | | | |
|---|---|---|---|
| 10. | ರೊನಾಲ್ಡ್<br>ಬಿನ್. ಜೋಸೆಫ್ ಮಾರ್ಟೀಸ್, | ನಿರ್ದೇಶಕರು | |
| 11. | ಮುದ್ದಣ್ಣ. ಹೆಚ್,<br>ಬಿನ್ ಲೇಟ್. ಎಸ್. ಎಂ. ಹಂಪಣ್ಣ, | ನಿರ್ದೇಶಕರು | |
| 12. | ಸತೀಶ್. ಬಿ.ಸಿ.<br>ಬಿನ್ ಬಿ. ಎನ್. ಚಂದ್ರಶೇಖರಯ್ಯ, | ನಿರ್ದೇಶಕರು | |
| 13. | ನಿರ್ಮಲ್ ಕುಮಾರ್<br>ಬಿನ್.ಬಾಬುಲಾಲ್ | ನಿರ್ದೇಶಕರು | |
| 14. | ದಿನೇಶ್ ಹೆಗ್ಡೆ,<br>ಬಿನ್ ರಾಘವ್ ಹೆಗ್ಡೆ, | ನಿರ್ದೇಶಕರು | |
| 15. | ಕಿರಣ್ ಕುಮಾರ್,<br>ಬಿನ್ ಎಂ.ಡಿ. ಹೆಗ್ಡೆ, | ನಿರ್ದೇಶಕರು | |
| 16. | ಶಿವಧ್ವಜ್ ಶೆಟ್ಟಿ,<br>ಬಿನ್ ಕೆ.ಪಿ. ತಿಮ್ಮಪ್ಪ ಶೆಟ್ಟಿ, | ನಿರ್ದೇಶಕರು | |
| 17. | ಅನಿಲ್ ಕುಮಾರ್,<br>ಬಿನ್ ಲೇಟ್. ಪಿ.ಕೆ. ಶಿವರಾವ್, | ನಿರ್ದೇಶಕರು | |

**ಸಾಕ್ಷಿಗಳು :-**

| <u>ಕ್ರಮ ಸಂಖ್ಯೆ</u> | <u>ಹೆಸರು ಮತ್ತು ವಿಳಾಸ ಶ್ರೀಮತಿ/ಶ್ರೀ</u> | <u>ವಯಸ್ಸು</u> | <u>ಉದ್ಯೋಗ</u> | <u>ಸಹಿ</u> |
|---|---|---|---|---|
| 1 | | | | |
| 2 | | | | |

# ಎಬಿಎಂ ಇನ್ಫೋಸಿಟಿ ಓನರ್ಸ್ ವೆಲ್‌ಫೇರ್ ಆಸೋಷಿಯೇಷನ್.

ನಂ.೩೮೯, ಎಬಿಎಂ ಇನ್ಫೋಸಿಟಿ ಬಡಾವಣೆ, ವಾರ್ಡ್ ಸಂಖ್ಯೆ ೦೨, ಕಲ್ಲುಗೋಪನಹಳ್ಳಿ ಗ್ರಾಮ, ಬಿಡದಿ ಹೋಬಳಿ, ರಾಮನಗರ ತಾ॥

ಮತ್ತು ಜಿಲ್ಲೆ–೫೬೨೧೦೯

## ೨೦೨೧–೨೨ನೇ ಸಾಲಿನ ಮೇಲ್ಕಂಡ ಅಸೋಷಿಯೇಷನ್ ಆಡಳಿತ ಮಂಡಳಿಯ ಸದಸ್ಯರ ಪಟ್ಟಿ

| ಕ್ರ.ಸಂ | ಹೆಸರು ಮತ್ತು ವಿಳಾಸ ಶ್ರೀಮತಿ/ಶ್ರೀ | ವಯಸ್ಸು | ಸಂಘದ ಹುದ್ದೆ | ವೃತ್ತಿ | ಭಾವ ಚಿತ್ರ | ಸಹಿ |
|---|---|---|---|---|---|---|
| ೧. | **ಕೆ.ಪ್ರಕಾಶ್ ರೈ**<br>ಬಿನ್ ಸುವರ್ಣ ರೈ<br>ನಂ.೩೮೯, ಎಬಿಎಂ ಇನ್ಫೋಸಿಟಿ,<br>ವಾರ್ಡ್ ನಂ.೦೨, ಕಲ್ಲುಗೋಪಹಳ್ಳಿ<br>ಗ್ರಾಮ, ಬಿಡದಿ, ರಾಮನಗರ–<br>೫೬೨೧೦೯ | 46 | ಅಧ್ಯಕ್ಷರು | ವ್ಯಾಪಾರ | | |
| 2. | **ಜಿತೇಂದ್ರ ಮಲ್ಲಿ**<br>ಬಿನ್ ಕೆ. ಉಗ್ಗಪ್ಪ ಮಲ್ಲಿ<br>ಎಫ್–೪೦೪, ರಹೇಜಾ ಪಾರ್ಕ್,<br>ಎ.ಡಿ.ಹಳ್ಳಿ, ಮಾಗಡಿ ರೋಡ್,<br>ಬೆಂಗಳೂರು–೭೯ | 57 | ಉಪಾಧ್ಯಕ್ಷರು | ವ್ಯಾಪಾರ | | |
| 3. | **ನಾಗೇಶ್ವರ್ ವಿಜಾಪುರ್**<br>ಬಿನ್ ಮಲ್ಲೇಶಪ್ಪ ವಿಜಾಪುರ್.<br>ನಂ. ೨೫/೧, ೩ನೇ ಮುಖ್ಯರಸ್ತೆ,<br>ಸಾಕಮ್ಮ ಗಾರ್ಡನ್, ಬಸವನಗುಡಿ,<br>ಬೆಂಗಳೂರು – ೦೪. | 58 | ಕಾರ್ಯದರ್ಶಿ | ವ್ಯಾಪಾರ | | |

| | | | | | | |
|---|---|---|---|---|---|---|
| 4. | **ಮನ್ಸೂರ್ ಕಲತ್ತಿನಾಲ್ ಪಕ್ಕರ್,**<br>ಬಿನ್ ಪಕ್ಕರ್ ಕಲತ್ತಿನಾಲ್ ಅಹಮ್ಮದ್,<br>ನಂ. ೧೯, ಫೆರ್ನ್ಸ್ ಹ್ಯಾಬಿಟೆಟ್<br>ಓಆರ್ಆರ್, ಫೆರ್ನ್ಸ್ ಐಕಾನ್ ಪಕ್ಕ,<br>ಅಕ್ಮೆ ಬ್ಯಾಲೆಟ್ ಅಪಾರ್ಟ್‌ಮೆಂಟ್,<br>ದೊಡ್ಡಾನೆಕುಂಡಿ, ಬೆಂಗಳೂರು ಉತ್ತರ,<br>ಮಾರತ್ತಹಳ್ಳಿ ಕಾಲೋನಿ,<br>ಬೆಂಗಳೂರು – ೩೭. | 48 | ಖಜಾಂಚಿ | ಸಾಫ್ಟ್‌ವೇರ<br>್<br>ಇಂಜಿನಿಯ<br>ರ್ | | |
| 5. | **ಕಾರ್ತಿಕ್ ರಾಮಚಂದ್ರ**<br>ಬಿನ್. ಹೆಚ್.ಎ.ರಾಮಚಂದ್ರ<br>೧೩/೨, ೨ನೇ ಮಹಡಿ, ಗಾಯತ್ರಿ<br>ಮ್ಯಾನ್ಷನ್, ಲಾಲ್‌ಭಾಗ್ ರೋಡ್,<br>ಬೆಂಗಳೂರು–೨೭ | 44 | ಜಂಟಿ<br>ಕಾರ್ಯದರ್ಶಿ | ವ್ಯಾಪಾರ | | |
| 6. | **ಪುಷ್ಪರಾಜ್ ಶೆಟ್ಟಿ,**<br>ಬಿನ್ ಎನ್. ಜಗನ್ನಾಥ ಶೆಟ್ಟಿ,<br>ನಂ. ೬೦೩, ಎಸ್‌ಎಲ್‌ಆರ್<br>ಮ್ಯಾನ್‌ಷನ್, ೩ನೇ ಹಂತ, ೧ನೇ<br>ಬ್ಲಾಕ್, ವಾಸವೇಶ್ವರ್ ನಗರ್,<br>ಬೆಂಗಳೂರು – ೭೯. | 66 | ಸಲಹೆಗಾರರು | ಕೃಷಿ | | |
| 7. | **ಎಸ್.ಆರ್.ನವೀನ್**<br>ಬಿನ್. ಎಸ್. ರಾಧಕೃಷ್ಣ<br>ನಂ.೦೩, ಬಿ ಬ್ಲಾಕ್, ಸಿ.ಐ.ಎಲ್<br>ಕಾಲೋನಿ, ಆರ್.ಎಂ.ವಿ. ೨ನೇ ಹಂತ,<br>ಬೆಂಗಳೂರು ೯೪ | 53 | ನಿರ್ದೇಶಕರು | ಸಮಾಜ<br>ಸೇವೆ | | |

| | | | | | | |
|---|---|---|---|---|---|---|
| | | | | | | |
| 8. | **ಸ್ಮಿತಾ ಪುಷ್ಪರಾಜ್ ಶೆಟ್ಟಿ**<br>ಕೋಂ. ಪುಷ್ಪರಾಜ್ ಶೆಟ್ಟಿ<br>ನಂ. ೬೦೩, ಎಸ್ಎಲ್ಆರ್<br>ಮ್ಯಾನ್ಷನ್, ೩ನೇ ಹಂತ, ೧ನೇ<br>ಬ್ಲಾಕ್, ವಾಸವೇಶ್ವರ್ ನಗರ್,<br>ಬೆಂಗಳೂರು – ೭೯. | 58 | ನಿರ್ದೇಶಕರು | ಸಮಾಜ<br>ಸೇವೆ | | |
| 9. | **ಶ್ರೀಕಾಂತ್.ಕೆ**<br>ಲೇ. ಪಿ.ಕೆ.ಉಪಾಧ್ಯಾಯ<br>ನಂ.೧೩೩, ೩ನೇ ಮುಖ್ಯ ರಸ್ತೆ, ೫ನೇ<br>ಅಡ್ಡರಸ್ತೆ, ೬ನೇ ಬ್ಲಾಕ್, ೩ನೇ ಫೇಸ್,<br>ಬನಶಂಕರಿ ೩ನೇ ಹಂತ,<br>ಬೆಂಗಳೂರು–೮೫ | 63 | ನಿರ್ದೇಶಕರು | ನಿವೃತ್ತ<br>ಲೆಕ್ಕ<br>ಪರಿಶೋಧಕ<br>ರು | | |
| 10 | **ರೊನಾಲ್ಡ್**<br>ಬಿನ್. ಜೋಸೆಫ್ ಮಾರ್ಟೀಸ್,<br>ನಂ.೪೦೪, ಅವೇ ಮರಿಯ, ೫ನೇ<br>ಕ್ರಾಸ್, ಟಾಟಾನಗರ, ಬೆಂಗಳೂರು–೯೨ | 50 | ನಿರ್ದೇಶಕರು | ಸ್ವ<br>ಉದ್ಯೋಗ | | |
| 11 | **ಮುದ್ದಣ್ಣ. ಹೆಚ್,**<br>ಬಿನ್ ಲೇಟ್. ಎಸ್. ಎಂ. ಹಂಪಣ್ಣ,<br>ನಂ. ೧೦, ೪ನೇ ಅಡ್ಡರಸ್ತೆ, ಬಾಪೂಜಿ<br>ಲೇಔಟ್, ಬಿಹೆಚ್ಇಎಲ್ ಟೌನ್‌ಶಿಪ್<br>ಹಿಂಭಾಗ, ವಿಜಯನಗರ, ೨ನೇ ಹಂತ,<br>ಬೆಂಗಳೂರು– ೪೦. | 70 | ನಿರ್ದೇಶಕರು | ನಿವೃತ್ತ<br>ಜಂಟಿ<br>ನಿರ್ದೇಶಕರ<br>ು<br>(ಟಿಆರ್‌ಜಿ) | | |

| | | | | | | |
|---|---|---|---|---|---|---|
| 12 | **ಸತೀಶ್. ಬಿ.ಸಿ.**<br>ಬಿನ್ ಬಿ. ಎನ್. ಚಂದ್ರಶೇಖರಯ್ಯ,<br>ನಂ.೨೦/೧, ಪ್ಲಾಟ್ ನಂ.೬೦, ೪ನೇ<br>ಕ್ರಾಸ್, ಕಾಳಿದಾಸ ಬಡಾವಣೆ, ಶ್ರೀನಗರ,<br>ಬೆಂಗಳೂರು-೫೦ | 54 | ನಿರ್ದೇಶಕರು | ವ್ಯಾಪಾರ | | |
| 13 | **ನಿರ್ಮಲ್ ಕುಮಾರ್**<br>ಬಿನ್.ಬಾಬುಲಾಲ್<br>ನಂ.೧೫, ಮುತ್ಯಾಲಮ್ಮ ದೇವಸ್ಥಾನ,<br>ಜಿ.ಸ್ಟ್ರೀಟ್, ಶಿವಾಜಿನಗರ,<br>ಬೆಂಗಳೂರು-೦೧ | 56 | ನಿರ್ದೇಶಕರು | ವ್ಯಾಪಾರ | | |
| 14 | **ದಿನೇಶ್ ಹೆಗ್ಡೆ,**<br>ಬಿನ್ ರಾಘವ್ ಹೆಗ್ಡೆ,<br>ನಂ. ಬಿ-೩೦೫, ಮಂತ್ರಿ ಗ್ರೀನ್ಸ್<br>ಅಪಾರ್ಟ್‌ಮೆಂಟ್, ನಂ. ೦೧, ಸಂಪಿಗೆ<br>ರಸ್ತೆ, ಮಲ್ಲೇಶ್ವರಂ, ಬೆಂಗಳೂರು-೦೩. | 51 | ನಿರ್ದೇಶಕರು | ವ್ಯಾಪಾರ | | |
| 15 | **ಕಿರಣ್ ಕುಮಾರ್,**<br>ಬಿನ್ ಎಂ.ಡಿ. ಹೆಗ್ಡೆ,<br>ನಂ. ೬೧, ಮಂಗಳ್ ಭವನ್, ೬ನೇ<br>ಕ್ರಾಸ್, ೪ನೇ ಮುಖ್ಯರಸ್ತೆ, ಮಹಾಲಕ್ಷ್ಮೀ<br>ಲೇಔಟ್, ಫರ್ದರ್ ಎಕ್ಸ್‌ಟೆನ್ಯನ್,<br>ಬೆಂಗಳೂರು – ೫೬೦ ೦೮೬. | 59 | ನಿರ್ದೇಶಕರು | ಸ್ವ<br>ಉದ್ಯೋಗ | | |

| | | | | | | |
|---|---|---|---|---|---|---|
| 16 | **ಶಿವಧ್ವಜ್ ಶೆಟ್ಟಿ,**<br>ಬಿನ್ ಕೆ.ಪಿ. ತಿಮ್ಮಪ್ಪ ಶೆಟ್ಟಿ,<br>ನಂ. ೧೨೨೩, ತಿರುಮಲ ವಿಕಾಸ್ ಅಪಾರ್ಟ್‌ಮೆಂಟ್, ೪ನೇ ಕ್ರಾಸ್, ೪ನೇ ಮುಖ್ಯರಸ್ತೆ, ೮೦ ಅಡಿ ರಸ್ತೆ, ಚಂದ್ರ ಲೇಔಟ್, ೨ನೇ ಹಂತ, ವಿನಾಯಕ ಆಸ್ಪತ್ರೆ ಹಿಂಭಾಗ, ಬೆಂಗಳೂರು–೪೦ | 50 | ನಿರ್ದೇಶಕರು | ನಟ/ನಿರ್ದೇಶಕರ/ನಿಮಾ೯ಪಕರು | | |
| 17 | **ಅನಿಲ್ ಕುಮಾರ್,**<br>ಬಿನ್ ಲೇಟ್. ಪಿ.ಕೆ. ಶಿವರಾವ್,<br>ನಂ. ೬, ೩ನೇ ಕ್ರಾಸ್, ಕುವೆಂಪುನಗರ, ದೊಡ್ಡಕಲ್‌ಸಂದ್ರ,<br>ಬೆಂಗಳೂರು – ೬೨. | 57 | ನಿರ್ದೇಶಕರು | ವ್ಯಾಪಾರ | | |

<u>ಸಾಕ್ಷಿಗಳು :–</u>

| <u>ಕ್ರಮ ಸಂಖ್ಯೆ</u> | <u>ಹೆಸರು ಮತ್ತು ವಿಳಾಸ</u><br><u>ಶ್ರೀಮತಿ/ಶ್ರೀ</u> | <u>ವಯಸ್ಸು</u> | <u>ಉದ್ಯೋಗ</u> | <u>ಸಹಿ</u> |
|---|---|---|---|---|
| 1 | | | | |
| 2 | | | | |